ತುಂಗ ಬಿಂಬ

ಸತ್ಯ ಮತ್ತು ಧೈರ್ಯದ ಧ್ವನಿ

TUNGA BIMBA | KANNADA DAILY MORNING | ಕನ್ನಡ ದಿನ ಪತ್ರಿಕೆ | RNI No: KARKAN/2023/86923

ಸಂಪುಟ: 04 ಸಂಚಿಕೆ: 76 ರಾಯಚೂರು 08-09-2026 ಮಂಗಳವಾರ ಪುಟ : 04 ಬೆಲೆ: ₹ 2.00 Postal Reg No.: RCR/L/RNP/95/2025-27 ಸಂಪಾದಕರು : ಗುರುರಾಜ ಕೆ

Vol: 04 Issue: 76 Raichur 08-09-2026 Tuesday Page: 04 Price: ₹ 2.00 tungabimba@gmail.com Editor: Gururaja K 98863 85685

ರಾಯಚೂರು ಮಹಾನಗರ ಪಾಲಿಕೆ ಹಾಗೂ ರಾಯಚೂರು ನಗರಾಭಿವೃದ್ಧಿ ಪ್ರಾಧಿಕಾರದ ಪ್ರಗತಿ ಪರಿಶೀಲನಾ ಸಭೆ

ಜನಸಂಖ್ಯೆಗೆ ಅನುಗುಣವಾಗಿ ವಿವಿಧ ಸೌಲಭ್ಯ ಒದಗಿಸಿ: ಸಚಿವ ಡಾ.ಯತೀಂದ್ರ

ರಾಯಚೂರು.ಸೆ.07: ಪ್ರಸ್ತುತ ಬರ ಇವರು ಕಾರಣ ಜನರಿಗೆ ಕುಡಿಯುವ ನೀರು ಸೇರಿದಂತೆ ಇತರೆ ಯಾವುದೇ ಸಮಸ್ಯೆಯಾಗದಂತೆ ನೋಡಿಕೊಳ್ಳಬೇಕು. ಅಲ್ಲದೆ ಜನಸಂಖ್ಯೆಗೆ ಅನುಗುಣವಾಗಿ ವಿವಿಧ ಸೌಲಭ್ಯಗಳನ್ನು ಸಾರ್ವಜನಿಕರಿಗೆ ಒದಗಿಸಬೇಕೆಂದು ಕರ್ನಾಟಕ ಸರ್ಕಾರದ ನಗರಾಭಿವೃದ್ಧಿ ಸಚಿವರು ಹಾಗೂ ಮೈಸೂರು ಜಿಲ್ಲಾ ಉಸ್ತುವಾರಿ ಸಚಿವರಾದ ಡಾ.ಯತೀಂದ್ರ ಸಿದ್ದರಾಮಯ್ಯ ಅವರು ಹೇಳಿದರು.

ಸೆಪ್ಟೆಂಬರ್ 07ರ ಸೋಮವಾರ ದಂದು ನಗರದ ಜಿಲ್ಲಾಧಿಕಾರಿಗಳ ಕಚೇರಿಯ ಸಭಾಂಗಣದಲ್ಲಿ ರಾಯಚೂರು ಮಹಾನಗರ ಪಾಲಿಕೆ ಹಾಗೂ ರಾಯಚೂರು ನಗರಾಭಿ ವೃದ್ಧಿ ಪ್ರಾಧಿಕಾರದ ಪ್ರಗತಿ ಪರಿಶೀಲನೆ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಬರುವ ದಿನಗಳಲ್ಲಿ ಹೆಚ್ಚಾಗುವ ನಗರದ ಜನಸಂಖ್ಯೆಗೆ ಅನುಗುಣವಾಗಿ ಕುಡಿಯುವ ನೀರು, ಘನ ತ್ಯಾಜ್ಯ ವಿಲೇವಾರಿಗೆ ಸೂಕ್ತ ಯೋಜನೆಯನ್ನು ರೂಪಿಸಬೇಕು. ರಾಯಚೂರು ನಗರದಲ್ಲಿ 3.5 ಲಕ್ಷ ಜನಸಂಖ್ಯೆಗೆ ಅಗತ್ಯವಿರುವ ಯೋಜನೆಗಳನ್ನು ರೂಪಿಸಲಾಗಿದೆ. ಆದರೆ ಭವಿಷ್ಯದಲ್ಲಿ ಬೇಡಿಕೆ ಹೆಚ್ಚಳವಾಗುವದನ್ನು ಸಹ ಪರಿಗಣಿ ಸಬೇಕೆಂದರು. ನಗರದಲ್ಲಿ 52 ಎಂಎಲ್‌ಡಿ ನೀಡಿನ ಪೂರೈಕೆ ಯಾಗು ತ್ತಿದ್ದು, 90 ಎಂಎಲ್‌ಡಿ ಬೇಡಿಕೆಯಿದೆ ಎಂದರು.

ನೀರು, ಘನತ್ಯಾಜ್ಯ ವಿಲೇವಾರಿ ಹಾಗೂ ಇನ್ನಿತರೆ ಮೂಲಭೂತ ಸೌಕರ್ಯ ಪ್ರಗತಿ ಪರಿಶೀಲನೆ ಸಂದರ್ಭದಲ್ಲಿ ನಗರಗಳು ತೀವ್ರವಾಗಿ ಬೆಳೆಯುವ ಹಿನ್ನೆಲೆಯ ಲ್ಲಿ ಮುಂದಿನ ದಿನಗಳಲ್ಲಿ ಅನುಕೂಲ ವಾಗುವ ರೀತಿಯಲ್ಲಿ ಯೋಜನೆ ರೂಪಿಸ ಬೇಕು. ಪ್ರಸ್ತುತ ಮಹಾನಗರ ಪಾಲಿಕೆಯ ಜನಸಂಖ್ಯೆ ಮುಂದಿನ ದಿನಗಳಲ್ಲಿ ಹೆಚ್ಚಗಳಾಲಿದೆ. ಅವರಿಗೆ ಕುಡಿಯುವ ನೀರು ಮತ್ತು ಘನ ತ್ಯಾಜ್ಯ ವಿಲೇಜ್ ವಿಲೇವಾರಿ ಮೂಲ ಭೂತ ಸುಗಮ

ವಾಗಿ ಸೌಕರ್ಯಗಳು ದೊರೆಯಲು ಅಗತ್ಯ ಕ್ರಮವಹಿಸಬೇಕು ಎಂದು ಸಚಿವರು ಸಂಬಂಧಿಸಿದ ಅಧಿಕಾರಿಗಳಿಗೆ ಸೂಚಿಸಿದರು.

ಕರ್ನಾಟಕ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮದ ಅಧ್ಯಕ್ಷರು ಆಗಿರುವ ರಾಯಚೂರು ಗ್ರಾಮಾಂತರ ಕ್ಷೇತ್ರದ ಶಾಸಕರಾದ ಬಸನಗೌಡ ದದ್ದಲ್ ಅವರು ಮಾತನಾಡಿ, ಗಣೇಕಲ್ ಜಲಾಶಯದಿಂದ ಕುಡಿಯುವ ನೀರು ಪಡೆಯುವ ಬದಲು

ಗುರ್ಜಾಪುರ ಜಲಾಶಯ ದಿಂದ ನಗರಕ್ಕೆ ಕುಡಿಯುವ ನೀರು ಪಡೆಯುವ ಯೋಜನೆ ರೂಪಿಸ ಬೇಕು. ಗಣೇಕಲ್ ಜಲಾಶಯದ ನೀರು ಪಡೆಯಲು ರೈತರ ಒತ್ತಡದ ಹಿನ್ನಲೆಯಲ್ಲಿ ಸಮಸ್ಯೆಯಾಗುತ್ತಿದೆ ಎಂದರು.

ವಿಧಾನ ಪರಿಷತ್ ಸದಸ್ಯ ಎನ್.ಎಸ್.ಬೋಸರಾಜು ಅವರು ಮಾತನಾಡಿ, ನಗರದಲ್ಲಿ ಕುಡಿಯುವ ನೀರಿನ ಜಾಲ ಸಮರ್ಪಕವಾಗಿ ಇಲ್ಲದೇ ಇರುವದರಿಂದ ಪೂರೈಕೆಯಲ್ಲಿಸೋರಿಕೆಯ ಅವ್ಯವಸ್ಥೆಯಿದೆ. ಸರಿಪಡಿಸಲು ವ್ಯವಸ್ಥಿತ ಯೋ ಜನೆ ರೂಪಿಸಿಕೊಳ್ಳ ಬೇಕೆಂ ದರು.

ಈ ವೇಳೆ ವಿಧಾನ ಪರಿಷತ್ ಸದಸ್ಯರಾದ ವಸಂತ ಕುಮಾರ ಅವರು ಮಾತನಾಡಿ, ದೇವಸೂಗೂರು, ಚಿಕ್ಕಸೂಗೂರು ನೀರಿನ ಶುದ್ದೀಕರಣ ಘಟಕಗಳು ಸ್ಥಗಿತ ಗೊಂಡಿದ್ದು, ನವೀಕರಣ ಕೈಗೊಂಡು ನೀರಿನ ಪೂರೈಕೆ ಪ್ರಮಾಣ ಹೆಚ್ಚಿಸುವ ಅವಕಾಶಗಳನ್ನು ಪಾಲಿಕೆ ಬಳಸಿಕೊಳ್ಳಬೇಕೆಂದರು.ಮಹಾನಗರ ಪಾಲಿಕೆ ಆಯುಕ್ತ ಜುಬಿನ್‌ಮ ಹೊಪಾತ್ರ ಅವರು ಮಾತನಾಡಿ, ನಗರದಲ್ಲಿ 35 ಸ್ಲಂ ಏರಿಯಾಗಳಿದ್ದು, ಹೊಸ ಮತ್ತು ಹಳೇ ಆಶ್ರಯ ಕಾಲೋನಿಗಳ ಸೌಕರ್ಯ ಒದಗಿಸಲು ಯೋಜನೆ ರೂಪಿಸಲಾಗಿದೆ. 135 ಕೋಟಿ ರೂ. ಅರ್ಬನ್ ಚಾಲೆಂಜ್ ಅನುದಾನದಲ್ಲಿ ಪ್ರಸ್ತಾವನೆ ಸಲ್ಲಿಸಿದ್ದು, ಕಮರ್ಷಿಯಲ್ ಕಾಂಪ್ಲೆಕ್ಸ್‌ಗೆ ಉಸ್ಮಾನಿಯಾ ತರಕಾರಿ ನಿರ್ಮಾಣ ಉದ್ದೇಶಿಸಲಾಗಿದೆ ಎಂದರು.

ಮಾವಿನ ಕೆರೆ ಅಭಿವೃದ್ಧಿಗಾಗಿ ಈಗಾಗಲೇ ಕಾಮಗಾರಿಯು ಪ್ರಗತಿಯಲ್ಲಿದೆ. 15ನೇ ಹಣಕಾಸು ಆಯೋಗದ ವತಿಯಿಂದ 67.72 ಕೋಟಿ ರೂ.ಗಳನ್ನು ಬಿಡುಗಡೆ ಮಾಡಲಾಗಿದೆ. ಎಸ್.ಎಫ್.ಸಿ/ಎಸ್.ಸಿ.ಎಸ್.ಪಿ, ಟಿಎಸ್.ಪಿ ವತಿಯಿಂದ 20.58 ಕೋಟಿ ರೂ. ಬಿಡುಗಡೆ ಮಾಡಲಾಗಿದ್ದು, ಶೇ.97.2ರಷ್ಟು ಅನುದಾನ ಬಳಕೆ ಮಾಡಲಾಗಿದೆ ಎಂದರು.ಆನೆ ಕಲಾಕೃತಿ ಉದ್ಘಾಟನೆ: ರಾಯಚೂರು ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿ ಸಂಗ್ರಹಿಸಲಾದ ವೆಸ್ಟ್ ವಂಡರ್ ಕುಡಿಯುವ ನೀರಿನ ವೆಸ್ಟ್ ಬಾಟಲಿಗಳನ್ನು ಬಳಸಿ, ಧಾರವಾಡದ ಆರ್ಟ್ ವ್ಯಾಲಿ ಸಂಸ್ಥೆಯಿಂದ ತಯಾರಿಸಿದ ಆನೆ ಕಲಾಕೃತಿಯನ್ನು ಸೋಮವಾರ ನಗರದ ಜಿಲ್ಲಾಧಿಕಾರಿಗಳ ಕಚೇರಿಯ ಆವರಣದಲ್ಲಿ ನಗರಾಭಿವೃದ್ಧಿ ಸಚಿವರಾದ ಡಾ.ಯತೀಂದ್ರ ಸಿದ್ದರಾಮಯ್ಯ ಅವರು ವೀಕ್ಷಿಸಿದರು. ಇದು ನೋಡುಗರ ಗಮನ ಸೆಳೆಯಿತು. ಮಹಾನಗರ ಪಾಲಿಕೆಯ ಸ್ವಸಹಾಯ ಸಂಘದ ಮಹಿಳೆಯರಿಂದ ವೆಸ್ಟ್

{2ನೇಪುಟ}

ಕುಡಿಯುವ ನೀರು ಪೂರೈಸಲು ವಿಸ್ತೃತ ಯೋಜನಾ ವರದಿ ಸಿದ್ಧ: ಸಚಿವ ಡಾ.ಯತೀಂದ್ರ ಸಿದ್ದರಾಮಯ್ಯ

ರಾಯಚೂರು.ಸೆ.07: ರಾಯಚೂರು ನಗರಕ್ಕೆ ನಿರಂತರ ಕುಡಿಯುವ ನೀರು ಪೂರೈಸಲು 190 ಕೋಟಿ ರೂ. ವೆಚ್ಚದ ಯೋಜನೆಗೆ ವಿಸ್ತೃತ ಯೋಜನಾ ವರದಿ ಸಿದ್ಧವಾಗಿದ್ದು, ಶೀಘ್ರದಲ್ಲೇ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲಾಗುವುದೆಂದು ನಗರಾಭಿವೃದ್ಧಿ ಸಚಿವರು ಹಾಗೂ ಮೈಸೂರು ಜಿಲ್ಲಾ ಉಸ್ತುವಾರಿ ಸಚಿವರಾದ ಡಾ.ಯತೀಂದ್ರ ಸಿದ್ದರಾಮಯ್ಯ ಅವರು ಹೇಳಿದರು.

ಸೆಪ್ಟಂಬರ್ 07ರ ಸೋಮವಾರ ದಂದು ನಗರದ ಜಿಲ್ಲಾಧಿಕಾರಿಗಳ ಕಚೇರಿಯ ಸಭಾಂಗಣದಲ್ಲಿ ಪತ್ರಿಕಾ ಗೋಷ್ಠಿಯನ್ನು ಉದ್ದೇಶಿಸಿ ಅವರು ಮಾತನಾಡಿದರು. ಅಮೃತ್ ಯೋಜನೆಯಡಿ ಕಾಮಗಾರಿ ಸ್ಥಗಿತಗೊಳಿಸಿದ್ದ ಗುತ್ತಿಗೆ ದಾರರ ವಿರುದ್ಧದ ನ್ಯಾಯಾಲಯದ ತಡೆಯಾಜ್ಞೆ ತೆರವುಗೊಂಡಿದ್ದು, ಮುಂದಿನ ದಿನಗಳಲ್ಲಿ ಕಾನೂನು ಕ್ರಮ ಕೈಗೊಳ್ಳಲಾಗುವುದು. ಗೋಶಾಲೆ ಜಾಗ ಸೇರಿದಂತೆ ವಿವಿಧೆ ಡೆ ನಡೆದಿರುವ ಅಕ್ರಮ ಒತ್ತುವರಿ ಪ್ರಕರಣಗಳಲ್ಲಿ ನ್ಯಾಯಾಲ ಯದ ಮೂಲಕ ಸರ್ಕಾರಿ ಜಾಗವನ್ನು ಮರಳಿ ವಶಕ್ಕೆ ಪಡೆಯಲು ಸಂಬಂ ಧಿಸಿದ ಅಧಿಕಾರಿಗಳಿಗೆ ಸೂಚಿಸಲಾ ಗಿದೆ ಎಂದರು. ರಾಯಚೂರಿನಲ್ಲಿ ಈಗಾ ಗಲೇ ಶೇ.60ಕ್ಕೂ ಹೆಚ್ಚು ಇ- ಖಾತಾ ವಿತರಿಸಲಾಗಿದ್ದು, ಶೇ.10 0ರಷ್ಟು ಪ್ರಗತಿ ಸಾಧಿಸಲು ವಿಶೇಷ ಅಭಿ ಯಾನ ನಡೆಸಲು ಅಧಿಕಾರಿ ಗಳಿಗೆ ಸೂಚಿಸಲಾಗಿದೆ ಎಂದರು.ಸಿದ್ರಾಂಪುರ ಬಡಾವಣೆಯಲ್ಲಿ ಸೈಟ್ ಪಡೆದ ಫಲಾನುಭವಿಗಳಿಗೆ ಸೇಲ್ ಡೀಡ್ ಮಾಡಿ ಹಕ್ಕುಪತ್ರ ನೀಡಲು ಸೂಚಿಸಲಾಗಿದೆ. ಗುಡ್ಡದ ಮೇಲಿರುವ 101 ನಿವೇಶನಗಳಿಗೆ ಪರ್ಯಾಯವಾಗಿ ಸಮೀಪದಲ್ಲೇ ಬೇರೆ ಜಾಗ ಗುರುತಿಸಿ ಶೀಘ್ರದಲ್ಲೇ ನಿವೇಶನ ಹಂಚಲಾಗುವುದು ಎಂದರು. ಪೌರಕಾರ್ಮಿಕರು ಮತ್ತು ನೈರ್ಮಲ್ಯ ಸಿಬ್ಬಂದಿ ಕೊರತೆ ನೀಗಿಸಲು ಗುತ್ತಿಗೆ ಆಧಾರದ ಮೇಲೆ ನೇಮಕ ಮಾಡಿಕೊಳ್ಳಲು ಅನುಮತಿ ನೀಡಲಾಗಿದೆ. ಜೊತೆಗೆ ನಗರದ ನೈರ್ಮಲ್ಯಕ್ಕಾಗಿ ಹೆಚ್ಚುವರಿ ವಾಹನ ಗಳನ್ನು ಖರೀದಿಸಲಾಗುತ್ತಿದೆ. ನಗರ ದ ರಸ್ತೆ ಮತ್ತು ಒಳಚರಂಡಿ ಅಭಿ ವೃದ್ಧಿಗಾಗಿ 51 ಕೋಟಿ ರೂ. ಅನು ದಾನ ಹಾಗೂ ಮಹಾತ್ಮ ಗಾಂಧಿ ನಗ ರಾಭಿವೃದ್ಧಿ ಯೋಜನೆಯಡಿ 181 ಕೋಟಿ ರೂ. ಅನುದಾನ ಮ ಂಜೂರಾ ಗಿದ್ದು, ಶೀಘ್ರವೇ ಕಾಮ ಗಾರಿ ಆರಂಭವಾಗಲಿದೆ. ನಗರಕ್ಕೆ 100 ಕೋಟಿ ರೂ. ವೆಚ್ಚದ ರಿಂಗ್ ರಸ್ತೆ ನಿರ್ಮಾಣಕ್ಕೂ ಸರ್ಕಾರಕ್ಕೆ ಪ್ರ ಸ್ತಾವನೆ ಸಲ್ಲಿಸಲಾಗುವುದು ಎಂದ ರು.ಮುಖ್ಯಮಂತ್ರಿಗಳ ಸೂಚನೆ ಯಂತೆ ಮುಂಬರುವ ಡಿಸೆಂಬರ್ ಒಳಗೆ ಮಹಾನಗರ ಪಾಲಿಕೆ ಹಾಗೂ ಇತರ ಸ್ಥಳೀಯ ಸಂಸ್ಥೆಗಳ ಚುನಾ ವಣೆಯನ್ನು ನಡೆಸಲು ಅಗತ್ಯ ಸಿದ್ಧತೆ ಮಾಡಿಕೊ ಳ್ಳಲಾಗು ತ್ತಿದೆ ಎಂದು ಸಚಿವರು ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದರು. ಇದೇ ಸಂದರ್ಭದಲ್ಲಿ

{2ನೇಪುಟ}

ಕೇಂದ್ರ ವಾಣಿಜ್ಯ ವಿಭಾಗದಲ್ಲಿ ಜಂಟಿ ಕಾರ್ಯದರ್ಶಿ ಉಜ್ವಲ್ ಕುಮಾರ್ ಘೋಷ್ ಅವರಿಂದ ಜಿಲ್ಲೆಯ ಗ್ರಾಮೀಣ ಪ್ರದೇಶದಲ್ಲಿ ಸಂಚಾರ

ಹರವಿ, ಹಿರೇಹಣಗಿ, ಕವಿತಾಳ ಪಟ್ಟಣಕ್ಕೆ ಭೇಟಿ ಕಾಮಗಾರಿಗಳ ಪರಿಶೀಲನೆ

ರಾಯಚೂರು.ಸೆ.07: ಜಿಲ್ಲೆಯ ಸಿರವಾರ ತಾಲ್ಲೂಕಿನ ಹರವಿ ಹಾಗೂ ಹಿರೇಹಣಗಿ, ಕವಿತಾಳ ಪಟ್ಟಣಕ್ಕೆ ಕೇಂದ್ರ ವಾಣಿಜ್ಯ ಮತ್ತು ಕೈಗಾರಿಕಾ ಸಚಿವಾಲಯದ ವಾಣಿಜ್ಯ ವಿಭಾಗದ ಜಂಟಿ ಕಾರ್ಯದರ್ಶಿಗಳು ಹಾಗೂ ಸಂಪೂರ್ಣತಾ ಮಹತ್ವಾಕಾಂಕ್ಷಿ ಕಾರ್ಯಕ್ರಮದ ಕೇಂದ್ರ ಸರಕಾರದ ಪ್ರಭಾರಿ ಜಿಲ್ಲಾ ಉಸ್ತುವಾರಿಗಳಾದ ಉಜ್ವಲ್ ಕುಮಾರ್ ಘೋಷ್ ಅವರು ಸೆಪ್ಟಂಬರ್ 07ರ ಸೋಮವಾರ ದಂದು ಭೇಟಿ ನೀಡಿ, ವಿವಿಧ ಕಾಮಗಾರಿಗಳು ಹಾಗೂ

ಯೋಜನೆಗಳ ಅನುಷ್ಠಾನದ ಕುರಿತು ಪರಿಶೀಲನೆ ನಡೆಸಿದರು.

ಮೊದಲಿಗೆ ಜಿಲ್ಲೆಯ ಸಿರವಾರ ತಾಲ್ಲೂಕಿನ ಪ್ರಾಥಮಿಕ ಆರೋಗ್ಯ ಕೇಂದ್ರಕ್ಕೆ ಭೇಟಿ ನೀಡಿ, ಗ್ರಾಮೀಣ ಭಾಗದ ಮಹಿಳೆಯರು ತಮ್ಮ ವೈಯಕ್ತಿಕ ಆರೋಗ್ಯದ ಕಡೆಗೆ ಹೆಚ್ಚಿನ ಗಮನಹರಿಸುವ ದಿಶೆಯಲ್ಲಿ ಸೂಕ್ತ ಸಲಹೆ ಸೂಚನೆ, ಜಾಗೃತಿ, ಆಪ್ತ ಸಮಾಲೋಚನೆ ಕೈಗೊಳ್ಳಲು ಇದಕ್ಕಾಗಿ ಬೇಕಾಗುವ ನೆರವನ್ನು ಸೂಕ್ತ ಕ್ರಿಯಾ ಯೋಜನೆ ಸಿದ್ಧಪಡಿಸಿ ಪಡೆದುಕೊಳ್ಳ ಬೇಕು ಎಂದು ಸಂಬಂಧಿಸಿದ ಅಧಿಕಾರಿಗಳಿಗೆ ಸೂಚಿಸಿದರು.

ಚಿಕಿತ್ಸೆಗಾಗಿ ಆಗಮಿಸಿದ ತಾಯ ಂದಿರು, ಸಾರ್ವಜನಿಕ ರೊಂದಿಗೆ ಖುದ್ದು ಮಾತನಾಡಿ ದರಲ್ಲದೆ, ಹೆರಿಗೆಗೆ ಆಗಮಿಸಿದಾಗ ಗರ್ಭಿಣಿಯ ಆರೋಗ್ಯದ ಸ್ಥಿರತೆ, ಪ್ರತಿ ತಿಂಗಳು ಪ್ರಧಾನ ಮಂತ್ರಿ ಸುರಕ್ಷಿತ ಮಾತೃತ್ವ ಅಭಿಯಾನದಡಿ ಗರ್ಭಿಣಿಯರ ತಪಾಸಣೆಯ ಕಾರ್ಯ ವಿಧಾನ, ತಾಯಿ ಕಾರ್ಡ್‌ಗಳು, ಹೆರಿಗೆ ಕೊಠಡಿ, ವಾರ್ಡ್, ಪ್ರಯೋಗಾ ಲಯ, ದಾಖಲಾತಿಗಳ ನಿರ್ವಹಣೆ ಪರಿಶೀಲಿಸಿ, ಗರ್ಭಿಣಿ ತಾಯಂದಿ ರಲ್ಲಿ ಕಂಡು ಬರುತ್ತಿರುವ ಅಧಿಕ ರಕ್ತದೊತ್ತಡದ ನಿಯಂತ್ರಣಕ್ಕಾಗಿ, ಆಹಾರ ಪದ್ಧತಿ, ಚಿಕಿತ್ಸಾ ವಿಧಾನಗಳು ಹಾಗೂ ಜೀವನ ಶೈಲಿಯಲ್ಲಿ ಮಾಡಬಹುದಾದ ಬದಲಾವಣೆಗಾ ಗಿ ಈಗಾಗಲೇ ರಾಜ್ಯಮಟ್ಟದಿ ಂದ ಪಡೆಯುತ್ತಿರುವ ತಾಂತ್ರಿಕ

{2ನೇಪುಟ}

41ನೇ ನೇತ್ರದಾನ ಪಾಕ್ಷಿಕ ನೇತ್ರದಾನ ಮಾಡುವ ಸಂಪ್ರದಾಯ ನಮ್ಮೆಲ್ಲರ ಸಂಪ್ರದಾಯವಾಗಲಿ: ಡಾ.ಗಣೇಶ್

ರಾಯಚೂರು.ಸೆ.07: ಮನುಷ್ಯನ ಮರಣಾನಂತರ ಇನ್ನೊಬ್ಬರ ಜೀವನಕ್ಕೆ ಬೆಳಕಾಗುವ ಕಣ್ಣುಗಳನ್ನು ಮಣ್ಣಲ್ಲಿ ಮಣ್ಣು ಮಾಡದೆ ದಾನ ಮಾಡುವ ಸಂಪ್ರದಾಯವು ಪ್ರತಿಯೊ ಬ್ಬದಾಗಿರಲಿ ಎಂದು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಜಿಲ್ಲಾ ಸರ್ವೆಕ್ಷಣಾ ಧಿಕಾರಿ ಡಾ. ಗಣೇಶ್ ಕೆ., ಅವರು ಹೇಳಿದರು.

ಸೆಪ್ಟಂಬರ್ 07ರ ಸೋಮವಾರ ದಂದು ನಗರದ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಆವರಣದಲ್ಲಿ ಜಿಲ್ಲಾಡ ಳಿತ, ಜಿಲ್ಲಾ ಪಂಚಾಯತ, ಜಿಲ್ಲಾ ಆರೋಗ್ಯ

{2ನೇಪುಟ}

ಪರಿಸರ ಸ್ನೇಹಿ ಗಣೇಶ ಹಬ್ಬ ಆಚರಣೆ ಕುರಿತು ಜಾಗೃತಿ ಕಾರ್ಯಕ್ರಮ

ರಾಯಚೂರು.ಸೆ.07: ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ ಪ್ರಾದೇಶಿಕ ಕಚೇರಿ ರಾಯಚೂರು ಮತ್ತು ಸರ್ಕಾರಿ ಪ್ರೌಢಶಾಲೆ ಯರಮರಸ್ ರಾಯಚೂರು ಇವರ ಸಂಯುಕ್ತ ಆಶ್ರಯದಲ್ಲಿ ಪರಿಸರ ಸ್ನೇಹಿ ಗಣೇಶ ಹಬ್ಬ ಆಚರಣೆಯ ಸೆಪ್ಟಂಬರ್ 07ರ ಸೋಮವಾರ ದಂದು ಯರಮರಸ್ ಸರ್ಕಾರಿ ಪ್ರೌಢಶಾಲೆಯಲ್ಲಿ ಜಾಗೃತಿ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಯಿತು.

ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯ ಸಹಾಯಕ ಪರಿಸರ ಅಧಿಕಾರಿ ಗಿರೀಶ್ ಅವರು ಮಾತನಾಡಿ, ಈ ವರ್ಷ ಗಣೇಶ ಹಬ್ಬವನ್ನು ಪರಿ ಸರ ಸ್ನೇಹಿಯಾಗಿ ಆಚರಿಸುವುದರೊಂದಿಗೆ

{2ನೇಪುಟ}

ವರುಣದೇವನ ಕೃಪೆಗಾಗಿ ಮುಸ್ಲಿಂ ಬಾಂಧವರಿಂದ ವಿಶೇಷ ಪ್ರಾರ್ಥನೆ, ಸಾಮೂಹಿಕ ನಮಾಜ್ ಸಲ್ಲಿಕೆ

ಸಿಂಧನೂರು: ಸೆ.07: ರಾಜ್ಯದಲ್ಲಿ ಭೀಕರ ಬರಗಾಲದ ಛಾಯೆ ಎದ್ದು ಕಾಣಿಸಿದ್ದು, ರೈತರು ಜನ-ಜಾನುವಾರಗಳು ಮಳೆ ಬಾರದೆ, ಒಂದು ಹನಿ ನೀರಿಲ್ಲದೆ ಪರದಾಡುವ ಪರಿಸ್ಥಿತಿ ಏದುರಾಗಿದೆ. ಈ ಕಾರಣ ವಾಗಿ ಸಿಂಧನೂರಿನ ಎಲ್ಲಾ ಮುಸ್ಲಿಂ ಬಾಂಧವರು ಮಳೆಗಾಗಿ ಪ್ರಾರ್ಥಿಸಿ ನಮಾಜ್ ಮಾಡಿ ವರುಣ ದೇವರು ಕೃಪೆ ತೋರಲೆಂದು ನಗರದ ಈದ್ಗಾ ಮೈದಾನದಲ್ಲಿ ಶುಕ್ರವಾರ ಮುಸ್ಲಿಂ ಬಾಂಧವರು ಮಳೆಗಾಗಿ ಸಾಮೂಹಿಕವಾಗಿ ಬಹಳ ವಿಶೇಷವಾಗಿ ಪ್ರಾರ್ಥಿಸಿ, ನಮಾಜ್ ಮಾಡಿದರು.

ನಗರದ ಬಡಿಬೇಸ್ ಮಸ್ಜಿದ್ ನಿಂದ ಮೆರವಣಿಗೆ ಮೂಲಕ ತೆರಳಿ ಈದ್ಗಾ ಮೈದಾನ ತಲುಪಿ, ಮಳೆಯ ಕೊರತೆಯಿಂದ ರೈತರು ಸೇರಿದಂತೆ ಸಾರ್ವಜನಿಕರು ಸಂಕಷ್ಟ ಅನುಭವಿಸುತ್ತಿದ್ದು, ಉತ್ತಮ ಮಳೆಯಾಗಿ ಫಸಲು ಬರಲಿ ಎಂದು ಪ್ರಾರ್ಥಿಸಿ, ವಿಶೇಷ ನಮಾಜ್ ಮಾಡಿದರು. ಉತ್ತಮ ಮಳೆಯಾಗಿ ಕೆರೆ-ಕಟ್ಟೆಗಳು ನೀರಿನಿಂದ ತುಂಬಲಿ, ರೈತರು ಸಮೃದ್ಧಿಯಾಗಿ ಬೆಳೆ ಬೆಳೆಯಲಿ, ಜನಜೀವನ ಸುಧಾರಿಸಲಿ ಹಾಗೂ ಎಲ್ಲೆಡೆ ಸುಖ-ಶಾಂತಿ ನೆಲೆಸಲಿ ಎಂದು ಪ್ರಾರ್ಥಿಸಿದರು.

ಈದ್ಗಾ ಕಮಿಟಿ ಅಧ್ಯಕ್ಷ ಸೈಯದ್ ಹಾರೂನ್ ಜಾಹಗೀರ್ ದಾರ್ ಮಾತನಾಡಿ, ಮಳೆಗಾಲ ಆರಂಭವಾಗಿ ಎರಡ್ಮೂರು ತಿಂಗಳು ಮುಗಿಯಿತ್ತಾ ಬಂದರೂ ತಾಲ್ಲೂಕಿನಲ್ಲಿ ಉತ್ತಮ ಮಳೆಯಾಗದೇ

{2ನೇಪುಟ}

ಸಚಿವರಾದ ಡಾ.ಯತೀಂದ್ರ ಸಿದ್ದರಾಮಯ್ಯ ಅವರಿಂದ ರಾಯಚೂರಿನ ಯಕ್ಲಾಸಪುರ, ರಾಂಪೂರು, ಮಾವಿನ ಕರೆಗಳಿಗೆ ಭೇಟಿ, ಪರಿಶೀಲನೆ

ರಾಯಚೂರು.ಸೆ.07: ರಾಯಚೂರಿನ ಯಕ್ಲಾಸಪುರ ಘನ ತ್ಯಾಜ್ಯ ಘಟಕ, ರಾಂಪೂರು ಕೆರೆ ಹಾಗೂ ರಾಯಚೂರಿನ ಐತಿಹಾಸಿಕ ಕೆರೆಯಾದ ಮಾವಿನ ಕೆರೆಗೆ ನಗರಾಭಿವೃದ್ಧಿ ಸಚಿವರು ಹಾಗೂ ಮೈಸೂರು ಜಿಲ್ಲಾ ಉಸ್ತುವಾರಿ ಸಚಿವರಾದ ಡಾ.ಯತೀಂದ್ರ ಸಿದ್ದರಾಮಯ್ಯ ಅವರು ಭೇಟಿ ನೀಡಿ, ಪರಿಶೀಲನೆ ನಡೆಸಿದರು.

ಜಿಲ್ಲಾಧಿಕಾರಿಗಳ ಕಚೇರಿಯಲ್ಲಿ ಪ್ರಗತಿ ಪರಿಶೀಲನಾ ಸಭೆಯ ನಂತರ ನೇರವಾಗಿ ಯಕ್ಲಾಸಪುರಿನ ಘನ ತ್ಯಾಜ್ಯ ಘಟಕಕ್ಕೆ ಭೇಟಿ ನೀಡಿ, ಅಲ್ಲಿ ನಡೆಯುತ್ತಿರುವ ವಿವಿಧ ಅಭಿವೃದ್ಧಿ ಕಾಮಗಾರಿಗಳ ಕುರಿತು ಮಹಾನಗರ ಪಾಲಿಕೆಯ ಅಧಿಕಾರಿಗಳಿಂದ ಮಾಹಿತಿ ಪಡೆದು, ಕಾಮಗಾರಿ ಗಳನ್ನು ನಿಗದಿತ ಅವಧಿಯಲ್ಲಿ ಹಾಗೂ ಗುಣಮಟ್ಟದಿಂದ ಮಾಡಬೇ ಕೆಂದು ಸಂಬಂಧಿಸಿದ ಅಧಿಕಾರಿಗಳಿಗೆ ಸೂಚಿಸಿದರು.

ನಂತರ ರಾಂಪೂರು ಕೆರೆಗೆ ಭೇಟಿ ನೀಡಿ, ಕೆರೆಯ ನೀರಿನ ಮಟ್ಟದವನ್ನು ವೀಕ್ಷಣೆ ಮಾಡಿದರು. ನಂತರ ಕೆರೆಯ ಪಕ್ಕದಲ್ಲಿ ಇರುವ ಜಲ ಶುದ್ಧೀಕರಣ ಘಟಕಕ್ಕೆ ಭೇಟಿ ನೀಡಿ, ಅಲ್ಲಿನ ಪ್ರಯೋಗಾಲಯ, ಜಲ ಶುದ್ಧೀಕರಣ

ಒಂದನೇ ಪುಟದಿಂದ...

ವರದಿ ಸಿದ್ಧ: ಸಚಿವ ಡಾ.ಯತೀಂದ್ರ ಸಿದ್ದರಾಮಯ್ಯ

ಕರ್ನಾ ಟಕ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮದ ಅಧ್ಯಕ್ಷರು ಆಗಿರುವ ರಾಯಚೂರು ಗ್ರಾಮಾ ಂತರ ಕ್ಷೇತ್ರದ ಶಾಸಕರಾದ ಬಸನ ಗೌಡ ದದ್ದಲ್, ಮಾಜಿ ಸಚಿವರು ಹಾಗೂ ಹಾಲಿ ವಿಧಾನ ಪರಿಷತ್ ಸದಸ್ಯರಾದ ಎನ್.ಎಸ್. ಭೋಸ ರಾಜು, ವಿಧಾನ ಪರಿಷತ್ ಸದಸ್ಯ ವಸಂತ ಕುಮಾರ್, ರಾಯ ಚೂರು ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರಾಗಿ ರಾಮ ಸ್ವಾಮಿ, ಜಿಲ್ಲಾಧಿಕಾರಿ ಪೂವಿತಾ ಎಸ್., ರಾ ಯಚೂರು ಮಹಾನಗರ ಪಾಲಿಕೆಯ ಆಯುಕ್ತ ಜುಬಿನ್ ಮಹಾಪಾತ್ರ, ಪಾಲಿಕೆಯ ವಿವಿಧ ವಿಭಾಗದ ಉಪ ಆಯುಕ್ತರಾದ ಶರಣಪ್ಪ, ಸಂತೋಷ ರಾಣಿ, ಮು ರಳೀಧರ ರಾವ್, ರಾ ಯ ಚೂರು ನಗರಾಭಿವೃದ್ಧಿ ಯೋ ಜನಾ ನಿರ್ದೇಶಕ ತಿಮ್ಮಪ್ಪ ಬಿರಾ ದಾರ್ ವಿವಿಧ ಇಲಾಖೆಯ ಅಧಿಕಾ ರಿಗಳು, ಸಿಬ್ಬಂದಿಗಳು ಸಭೆಯಲ್ಲಿ ಇದ್ದರು.

ವಿಶೇಷ ಪ್ರಾರ್ಥನೆ, ಸಾಮೂಹಿಕ ನಮಾಜ್ ಸಲ್ಲಿಕೆ

ಇರುವುದರಿಂದ ಕೆರೆ, ಹಳ್ಳ, ಕೊಳ್ಳಗಳು ಬತ್ತಿ ಹೋಗಿದೆ. ಜಾನುವಾರುಗಳಿಗೆ ನೀರು, ಮೇವು ದೊರಕುತ್ತಿಲ್ಲ. ರೈತರು ಸಂಕಷ್ಟಕ್ಕೆ ಒಳಗಾಗಿದ್ದಾರೆ. ಉತ್ತಮ ಮಳೆ ಕರುಣಿಸುವಂತೆ ದೇವರನ್ನು ಪ್ರಾರ್ಥಿಸಿಲಾಗಿದೆ ಎಂದು ತಿಳಿಸಿದರು.

ಈ ವೇಳೆ: ಮೌಲಾನಾಗಳಾದ ತಾಜುಮುದ್ದೀನ್, ಮೆಹಬೂಬ್ ಮುಳ್ಳೂರು, ಗಫೂರ್ ಸಾಬ್, ಉಸಮಾ ಸಾಬ್, ಮುಖಂಡರಾದ ಜಾಫರ್ ಅಲಿ ಜಾಹಗೀರ್ ರ್ದಾ, ಕೆ.ಜಿಲಾನಿಪಾಷಾ, ಟಿ.ಹುಸೇನ ಸಾಬ್, ಶಫ್ಶುವುಲ್ಲಾ ಖಾನ್, ಮಹ್ಮದ್ ಸಾಬ್ ಬಡೂ, ಎಸ್.ಎಂ.ಖಾದ್ರಿ ಸಾಲಗುಂದಾ, ಸೇರಿದಂತೆ ಸಾವಿ ರಾರು ಸಂಖ್ಯೆಯಲ್ಲಿ ಮುಸ್ಲಿಂ ಸಮಾಜದವರು ಭಾಗವಹಿಸಿ ಪ್ರಾರ್ಥಿಸಿದರು.

ಪಟ್ಟಣಕ್ಕೆ ಭೇಟಿ ಕಾಮಗಾರಿಗಳ ಪರಿಶೀಲನೆ

ಸಹಾ ಯವನ್ನು ಪರಿಣಾಮ ಕಾರಿಯಾಗಿ ವಿಶ್ಲೇಷಣೆ ಕೈಗೊಂಡು, ಈ ಭಾಗದ ಜನರಿಗೆ ಹೆಚ್ಚಿನ ಜಾಗೃತಿ ನೀಡಬೇಕೆಂದು

ಸೂಚಿಸಿದರು.

ಅಂಗ

ನವಾಡಿ ಕೇಂದ್ರ 23ಕ್ಕೆ ಭೇಟಿ ನೀಡಿ, ತೀವ್ರ ಅಪೌಷ್ಟಿಕತೆಯಿಂದ ಬಳಲುತ್ತಿರುವ ಮಕ್ಕಳನ್ನು ಮೇಲ್ವಿಚಾರಣೆ ಮಾಡಬೇಕು. ತೋಕ, ಮೊಟ್ಟೆ ವಿತರಣೆ ಹಾಗೂ ಪೌಷ್ಟಿಕಾಂಶವುಳ್ಳ ಪದಾರ್ಥಗಳನ್ನು ಪೂರೈಸಬೇಕು. ಗರ್ಭಿಣಿ ಬಾಣಂತಯರಿಗೆ ಸರ್ಮಪಕವಾಗಿ ಪೌಷ್ಟಿಕ ವಿತರಿಸಬೇಕು. ಶಾಲಾ ಪೂರ್ವ ಶಿಕ್ಷಣ ತರಬೇತಿಯ ಬಗ್ಗೆ ಮಾಹಿತಿ ಪಡೆದುಕೊಂಡರು. ಪ್ರತಿ ದಿನ ಮಕ್ಕಳ ಹಾಜರಾತಿ ಸಂಖ್ಯೆ ಪರಿಶೀಲಿಸಿ, ಅಂಗನವಾಡಿ ಕೇಂದ್ರದಲ್ಲಿ ಮೂಲಭೂತ ಸೌಕರ್ಯಗಳನ್ನು ಕಲ್ಪಿಸುವಂತೆ ಸೂಚಿಸಿದರು.

ವಿ.ಬಿ.ಜಿ. ರಾಮ್ ಜಿ ಕಾಮಗಾರಿ ಪರಿಶೀಲನೆ: ಹರವಿ ಗ್ರಾಮದಲ್ಲಿ ನಡೆಯುತ್ತಿರುವ ನಾಲಾ ಹೂಳೆತ್ತುವ ಕಾಮಗಾರಿ ಸ್ಥಳಕ್ಕೆ ಭೇಟಿ ನೀಡಿ, ಕೂಲಿ ಕಾರ್ಮಿಕರೊಂದಿಗೆ ವಿ.ಬಿ.ಜಿ. ರಾಮ್ ಜಿ ಯೋಜನೆಯಡಿ ದೊರೆಯುವ ಸೌಲಭ್ಯಗಳ ಕುರಿತು ಸಂವಾದ ನಡೆಸಿದರು.

ದುಡಿವ ಕಾರ್ಮಿಕ ಕೈಗಳಿಗೆ ಕೆಲಸ ನೀಡಲು ಹಾಗೂ ಎಲ್ಲ ಅರ್ಹ ಬಡ ಗ್ರಾಮೀಣರಿಗೆ ಉದ್ಯೋಗ ಖಾತ್ರಿಪಡಿಸಲು ವಿಬಿಜಿ-ರಾಮ್ ಜಿ ಯೋಜನೆಯಡಿ ಜಾಬ್ ಕಾರ್ಡ್ ಹೊಂದಿದ ಕೂಲಿಕಾರರ ಪ್ರತಿ ಕುಟುಂಬಕ್ಕೆ 125 ದಿನ ಕೂಲಿ ಕೆಲಸ ಒದಗಿಸಲಾಗುತ್ತಿದಿದ್ದು, ಕೆಲಸ ಚೆನ್ನಾಗಿ ಮಾಡಬೇಕೆಂದು ಸೂಚಿಸಿ, ನಂತರ ಕೂಲಿಕಾರರ ಸಮಸ್ಯೆಗಳನ್ನು ಆಲಿಸಿದರು.ಗ್ರಾಮದಲ್ಲಿ ಕುಡಿಯುವ ನೀರಿನ ಸಮಸ್ಯೆ ನಿವಾರಿಸಬೇಕೆಂದು ಕೂಲಿಕಾರ್ಮಿಕರು ಮನವಿ ಮಾಡಿದರು. ಮುಖ್ಯ ಕಾಲುವೆಯ ಮಷಿನ್ ರಿಗಳಿಂದ ಹೂಳು ತೆಗೆಯುವದಕ್ಕೆ ಅನುಮತಿ ನೀಡಬೇಕೆಂದು ಒತ್ತಾಯಿಸಿದರು.

ತದನಂತರ ಹಿರೇಹಣಗಿ ಗ್ರಾಮದಲ್ಲಿ ಜಲ ಜೀವನ್ ಮಿಷನ್ ಯೋಜನೆಯಡಿ ಮನೆ ಮನೆಗೆ ನಳ ಸಂಪರ್ಕ ಕಲ್ಪಿಸಿರುವ ಪರಿಶೀಲಿಸುತ್ತ ಪ್ರತಿ ದಿನ ಕುಡಿಯುವದಕ್ಕೆ ನೀರು ಪೂರೈಕೆ ಹಾಗೂ ನಳ್ಳದ ತೆರಿಗೆ ಪಾವತಿಸುವ ಕುರಿತು ಗ್ರಾಮಸ್ಥರಿಂದ ಮಾಹಿತಿ ಪಡೆದುಕೊಂಡರು.

ಮಕ್ಕಳೊಂದಿಗೆ ಸಂವಾದ: ನಂತರ ಕವಿತಾಳ ಪಟ್ಟಣದ ಸರ್ಕಾರಿ ಬಾಲಕಿಯರ ಪ್ರೌಢಶಾಲೆಗೆ ಭೇಟಿ ನೀಡಿ, ವಿದ್ಯಾರ್ಥಿಗಳ ಕಲಿಕಾ ಸಾಮರ್ಥ್ಯ ಪರಿಶೀಲಿಸುತ್ತ, ಮಕ್ಕಳಿಗೆ ಗಣಿತ ವಿಷಯದ ಬಗ್ಗೆ ಬೋಧನೆ ಮಾಡಿದರು. ವಿದ್ಯಾರ್ಥಿಗಳ ಚೆನ್ನಾಗಿ ಅಭ್ಯಾಸ ಮಾಡಬೇಕು. ಎಲ್ಲಾ ವಿಷಯಗಳ ಕುರಿತು ಅಲಾವಾಗಿ ಅಧ್ಯಯನ ಮಾಡಬೇಕೆಂದರು. ಮುಂದಿನ ಎಸ್. ಎಸ್.ಎಲ್.ಸಿ ಪರೀಕ್ಷೆಯಲ್ಲಿ ಉತ್ತಮ ಫಲಿತಾಂಶ ಬರುವಂತೆ ಅಧ್ಯಯನ ಮಾಡಿ ತಾಲೂಕಿಗೆ ಕೀರ್ತಿ ತರಬೇಕು. ಬಿಸಿಯೂಟ ಚೆನ್ನಾಗಿರಬೇಕು, ಮೊಟ್ಟೆ, ಹಾಲು ವಿತರಣೆ ಮಾಡುತ್ತಿರುವ ಬಗ್ಗೆ ಮಾಹಿತಿ ಪಡದರು.

ಎಟಿಎಲ್: ಅಟಲ್ ಟಿಂಕರಿಂಗ್ ಲ್ಯಾಬ್ (ಎಟಿಎಲ್) ಮಕ್ಕಳ ಮಾಡಿರುವ ಮಾದರಿಗಳನ್ನು ವೀಕ್ಷೀಸಿ ಪ್ರಶಂಸೆ ವ್ಯಕ್ತಪಡಿಸಿದರು. ಸೆನ್ಸರ್, ಕ್ಯೂರ್ ಕೋಡ್, ಸ್ಮಾರ್ಟ್ ವಿದ್ಯಾಲಯ, ಮೆಕಾನಿಕ್ ಹಾಗೂ ತ್ರೀಡಿ ಪ್ರೀಂಟರ್ ಮಾದರಿಗಳನ್ನು ವೀಕ್ಷಣೆ ಮಾಡಿ ಮೆಚ್ಚುಗೆ ಮಾಡಿದರು. ಇದೇ ಸಂದರ್ಭದಲ್ಲಿ ಜಿಲ್ಲಾ ಪಂಚಾಯತಿಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಾದ ಈಶ್ವರ್ ಕುಮಾರ್ ಕಾಂದೂ, ಮುಖ್ಯ ಯೋಜನಾಧಿಕಾರಿ ಡಾ. ಟಿ.ರೋಣಿ, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ. ನಂದಿತಾ ಎಮ್.ಎನ್., ಕಾರ್ಯಪಾಲಕ ಅಭಿಯಂತರರು ದೊರೆಸ್ವಾಮಿ, ಸಾರ್ವಜನಿಕ ಶಿಕ್ಷಣ ಇಲಾಖೆಯ ಉಪ ನಿರ್ದೇಶಕ ಮಲ್ಲಿಕಾರ್ಜುನ ಸ್ವಾಮಿ, ತಾಲ್ಲೂಕು ಪಂಚಾಯತಿಯ ಕಾರ್ಯನಿರ್ವಾಹಕ ಅಧಿಕಾರಿ ಮಂಜುನಾಥ ಜಾವೂರ, ಸಹಾಯಕ ನಿರ್ದೇಶಕರಾದ ಬಸವರಾಜ, ಶಿಶು ಅಭಿವೃದ್ಧಿ ಯೋಜನಾಧಿಕಾರಿ ವಿರುಪಾಕ್ಷಯ್ಯ ಸ್ವಾಮಿ, ಪಿಡಿಒ, ತಾ.ಪಂ ಹಾಗೂ ಗ್ರಾಮ ಪಂಚಾಯತಿಯ ಸಿಬ್ಬಂದಿ ವರ್ಗದವರು ಇದ್ದರು.

ನಮ್ಮೆಲ್ಲರ ಸಂಪ್ರದಾಯವಾಗಲಿ: ಡಾ.ಗಣೇಶ್

ಮತ್ತು ಕುಟುಂಬ ಕಲ್ಯಾಣ ಇಲಾಖೆ, ಜಿಲ್ಲಾ ಅಂಧತ್ವ ನಿಯಂ ತ್ರಣ ವಿಭಾಗ ರಿಮ್ಸ್ ಬೋಧಕ ಆಸ್ಪತ್ರೆ, ನವೋದಯ ಮೆಡಿಕಲ್ ಕಾಲೇಜ್, ನೇತ್ರ ವಿಭಾಗ, ಎಮ್. ಎಮ್. ಜೋಷಿ ಕಣ್ಣಿನ ಆಸ್ಪತ್ರೆ, ಎಸ್.ಕೆ.ಇ. ಪ್ಯಾರಾ ಮೆಡಿ ಕಲ್ ಕಾಲೇಜ್ ಹಾಗೂ ವಿವಿಧ ಸಂಘ ಸಂಯುಕ್ತಾಶ್ರಯದಲ್ಲಿ 41ನೇ ನೇತ್ರದಾನ ಪಾಕ್ಷೀಕದ ಅಂಗವಾಗಿ ಹಮ್ಮಿಕೊಂಡ ಜಾಥಾ ಹಾಗೂ ನೇತ್ರದಾನಿಗಳ ಕುಟುಂಬದ ಸದಸ್ಯರಿಗೆ ಗೌರವ ಸಮರ್ಪಣಾ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಅವರು ಮಾತನಾಡಿದರು.ವಿವಿಧ ಕಾರಣಗಳಿಂದ ಅಂಧತ್ವಕ್ಕೆ ಒಳಗಾಗುವ ವ್ಯಕ್ತಿಗಳಿಗೆ ದಾನಿಗಳ ಕಣ್ಣುಗಳಿಂದ ಕಾರ್ನಿಯಾವನ್ನು ಕಸಿ ಮಾಡುವ ಮೂಲಕ ಜೀವನದಲ್ಲಿ ಹೊಸ ಬೆಳಕನ್ನು ಮೂಡಿಸಲು ಕೈಜೊಡಿಸಲು ಕಣ್ಣುಗಳ ದಾನ ಮಾಡುವ ಸಂಪ್ರದಾಯ ನಮ್ಮದಾಗಲಿ ಎಂದರು.

ಇದಕ್ಕೂ ಮುಂಚೆ ಪ್ರಾಸ್ತಾವಿಕವಾಗಿ ಜಿಲ್ಲಾ ಅಂಧತ್ವ ನಿಯಂತ್ರಣಾಧಿಕಾರಿ ಡಾ.ಶಿವಕುಮಾರ ನಾರಾ ಅವರು ಮಾತನಾಡಿ, ಜಿಲ್ಲೆಯಲ್ಲಿ ಕಳೆದ ವರ್ಷ 20 ನೇತ್ರಗಳನ್ನು ದಾನವಾಗಿ ಪಡೆಯಲಾಗಿದ್ದು, ಎಲ್ಲ ನೇತ್ರಗಳನ್ನು ಅಂಧತ್ವವಿರುವವರಿಗೆ ಶಸ್ತ್ರ ಚಿಕಿತ್ಸೆ ಮೂಲಕ ಕಸಿ ಮಾಡಿದ್ದು, ಜೀವನದಲ್ಲಿ ಬೆಳಕು ಕಂಡಿದ್ದಾರೆ. ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ ನಂದಿತಾ ಎಮ್.ಎನ್. ಅವರ ಮಾರ್ಗದರ್ಶನಲ್ಲಿ ಅಂಧತ್ವ ನಿಯಂತ್ರಣ ಕಾರ್ಯಕ್ರಮ ಹಾಗೂ ಆಶಾಕಿರಣ ಕಾರ್ಯಕ್ರಮದಡಿ 16,139 ಜನರಿಗೆ ನೇತ್ರ ಪೋರೆ ಶಸ್ತ್ರ ಚಿಕಿತ್ಸೆ ಹಾಗೂ 9,412 ಕನ್ನಡಕ ವಿತರಣೆ ಮಾಡಲಾಗಿದ್ದು, ಸಾರ್ವಜನಿಕರು ಇದರ ಸದುಪಯೋಗ ಪಡೆದುಕೊಳ್ಳಬಹುದಾಗಿದೆ ಎಂದರು.

ರಿಮ್ಸ್ ನೇತ್ರವಿಭಾಗದ ಮುಖ್ಯಸ್ಥರಾದ ಡಾ ಸಿದ್ದೇಶ್ ಕುಮಾರ್, ಎಮ್ಎಮ್ ಜೋಶಿ ಆಸ್ಪತ್ರೆಯ ಸುಧಾ, ಎಸ್ಕೆಇ ಪ್ಯಾರಾಮೆಡಿಕಲ್ ಕಾಲೇಜಿನ ಪ್ರಾಂಶುಪಾಲ ಡಾ ಬಾಬುರಾವ್ ಶೇಗುಣಸಿ ಅವರು ಮಾತನಾಡಿದರು. ದಾನಿಗಳ ಕುಟುಂಬದ ಸದ್ಯರಿಗೆ ಗೌರವ ಅರ್ಪಣೆ: ಮರಣದ ನಂತರ ಕಣ್ಣುಗಳ ದಾನ ಮಾಡಿದ ಮಹನೀಯರ ಕುಟುಂಬದ ಸದಸ್ಯರನ್ನು ಗೌರವಿಸಿ ಸನ್ಮಾನಿಸಲಾಯಿತು.

ನಗರದ ಪ್ರಮುಖ ರಸ್ತೆಗಳಲ್ಲಿ ಜಾಥಾ: ವೈದ್ಯಕೀಯ ಕಾಲೇಜು ವಿಧ್ಯಾರ್ಥಿಗಳು, ಪಿಹೆಚ್ಸಿಒ, ಆಶಾ ಕಾರ್ಯಕರ್ತೆಯರ ಮೂಲಕ ಜಾಥಾ ಮೂಲಕ ಪ್ರಮುಖ ಬೀದಿಗಳಲ್ಲಿ ಸಂಚರಿಸಿ ಜಾಗೃತಿ ಮೂಡಿಸಲಾಯಿತು.

ಇದೇ ಸಂದರ್ಭದಲ್ಲಿ ಜಿಲ್ಲಾ ಕ್ಷಯರೋಗ ನಿರ್ಮೂಲನಾಧಿಕಾರಿ ಡಾ.ಯಶೋಧಾ, ತಾಲೂಕಾ ಆರೋಗ್ಯಾಧಿಕಾರಿ ಡಾ.ಸತೀಶ್, ನವೋದಯ ಕಾಲೇಜಿನ ನೇತ್ರ ವಿಭಾಗ ಮುಖ್ಯಸ್ಥರು, ಡಾ.ಅನುಪಮ, ರಾಷ್ಟ್ರೀಯ ಅಂಗಾಂಗ ದಾನ ಸಮಿತಿಯ ರಾಜೇಂದ್ರ, ನವೋದಯ ಕಾಲೇಜಿನ ಡಾ.ಜೀವಿಕ, ಯುಪಿಹೆಚ್ಸಿಯ ವೈದ್ಯಾಧಿಕಾರಿ ಡಾ.ಆಸ್ಫಕ್ ಹುಸೇನ್, ಶ್ವೇತಾಂಬರಿ, ಡಿಹೆಚ್ಇಒ ಈಶ್ವರ ಹೆಚ್ ದಾಸಪ್ಪನವರ, ಡಿವೈಡಿಹೆಚ್ಇಒ ಬಸಯ್ಯ, ನೇತ್ರ ವಿಭಾಗದ ಭಾರತಿ, ಬಿಹೆಚ್ಇಒ ಸರೋಜಾ ಕೆ, ಎಮ್ಟಿಎಸ್ ಸಂಧ್ಯಾ, ನೇತ್ರಾಧಿಕಾರಿ ಸುಶೀಲೇಂದ್ರ, ಸರಾ ಉಸ್ಮಾನ್, ಜಮೀರ್ ಅಹ್ಮದ್, ವಿರೇಶ್ ಸೇರಿದಂತೆ ಇತರರು ಇದ್ದರು.

ಗಣೇಶ ಹಬ್ಬ ಆಚರಣೆ ಕುರಿತು ಜಾಗೃತಿ ಕಾರ್ಯಕ್ರಮ

ರಾಯಚೂರು ಜಿಲ್ಲೆಯ ಜಲಮೂ ಲಗಳಾದ ನದಿ, ಕೆರೆ ಹಾಗೂ ಬಾವಿಗಳನ್ನು ಸಂರಕ್ಷಿಸುವ ಸಲುವಾಗಿ ನೈಸರ್ಗಿಕ ಬಣ್ಣಗಳಿಂದ ಸಿದ್ದಪಡಿಸಿದ ಮಣ್ಣಿನ ಗಣೇಶ ಮೂರ್ತಿಗಳನ್ನು ಪ್ರತಿಷ್ಠಾ ಪಿಸಿ ಪೂಜಿಸಲು ಸರ್ಕಾರಿ ಶಾಲಾ ಮಕ್ಕಳಿಗೆ ತಿಳಿಸಿದರು. ಪ್ಲಾಸ್ಟರ್ ಆಫ್ ಪ್ಯಾರಿಸ್ ವಸ್ತುಗಳು ಮತ್ತು ಲೋಹ ಮಿಶ್ರಿತ ಬಣ್ಣಗಳನ್ನು ಉಪ ಯೋಗಿಸುವುದರಿಂದ ನೈಸರ್ಗಿಕ ಜಲಮೂಲಗಳು ಕಲುಷಿತಗೊಂಡು ಇವುಗಳ ಭೌತಿಕ ಹಾಗೂ ರಾಸಾಯನಿಕ ಗುಣಗಳು ಮಾರ್ಪಟ್ಟು ಪರಿಸರದ ಮೇಲೆ ದುಷ್ಪರಿಣಾಮ ಉಂಟಾಗುವುದಲ್ಲದೇ ಪ್ರಾಣಿ, ಪಕ್ಷಿ ಹಾಗೂ ಜಲಚರಗಳ ಜೀವಕ್ಕೆ ಅಪಾಯವಾಗುತ್ತದೆ. ಅಲ್ಲದೇ ಸಾರ್ವಜನಿಕ ಆರೋಗ್ಯಕ್ಕೆ ಧಕ್ಕೆ ಉಂಟಾಗುತ್ತದೆ. ಗಣೇಶನ ಮೂರ್ತಿಗಳ ವಿಸರ್ಜನೆಯಿಂದ ಕೆರೆ, ಬಾವಿ, ಕೊಳ, ನದಿಗಳಲ್ಲಿನ ನೀರು ಮಾಲಿನ್ಯವಾಗದಂತೆ ಮೇಲ್ವಿಚಾರಣೆ ವಹಿಸುವುದು ಅವಶ್ಯಕ ಹಾಗೂ ಇದಕ್ಕಾಗಿ ಎಲ್ಲರ ಸಹಕಾರ ಅಗತ್ಯವಾಗಿದೆ ಎಂದರು.ಹಬ್ಬದ ಸಂದರ್ಭದಲ್ಲಿ ಪ್ಲಾಸ್ಟಿಕ್ ರಹಿತ ವಸ್ತುಗಳ ಬದಲಿಗೆ ಹೂವು ಪತ್ರೆಗಳಿಂದ ಅಲಂಕರಿಸಿ ಮಣ್ಣಿನ ಗಣೇಶ ಮೂರ್ತಿಯನ್ನು ಪೂಜಿಸುವುದು. ಪರಿಸರ ಸಂರಕ್ಷಣೆಗಾಗಿ ನಾವೆಲ್ಲರೂ ಒಟ್ಟಾಗಿ ಮುಂದೆ ಬರಬೇಕು. ಪ್ಲಾಸ್ಟಿಕ್ ವಸ್ತುಗಳ ನಿಷೇಧವಾದರೂ ಸಹ ಪ್ಲಾಸ್ಟಿಕ್ ವಸ್ತುಗಳನ್ನು ಬಳಸಲಾಗುತ್ತಿದೆ. ಕೇವಲ ಬಟ್ಟೆ ಚೀಲಗಳನ್ನು ಬಳಸಿ ಪ್ಲಾಸ್ಟಿಕ್ ಕ್ಯಾರಿಬ್ಯಾಗ್ಗಳನ್ನು ಬಳಸಬೇಡಿ ಎಂದು ವಿದ್ಯಾರ್ಥಿಗಳಿಗೆ ತಿಳಿಸಿದರು.

ಈ ವೇಳೆ ಶಾಲೆಯ ಮುಖ್ಯೋಪಾಧ್ಯಯ ಕೃಷ್ಣ ಅವರು ಮತಾನಾಡಿ, ಗಣೇಶ ಹಬ್ಬದಲ್ಲಿ ಮಣ್ಣಿನ ಮೂರ್ತಿಯನ್ನು ಪೂಜಿಸಿ, ಪ್ಲಾಸ್ಟಿಕ್ ಹಾರ, ಪ್ಲಾಸ್ಟಿಕ್ ಹೂ, ಕ್ಯಾರಿ ಬ್ಯಾಗ್ಗಳನ್ನು ಬಳಸಬೇಡಿ ಎಂದು ವಿದ್ಯಾರ್ಥಿಗಳಿಗೆ ತಿಳಿಸಿದರು.

ಇದೇ ಸಂದರ್ಭದಲ್ಲಿ ಸಹ ಶಿಕ್ಷಕರಾದ ಸುವರ್ಣ, ಪ್ರವೀಣ್, ವೈಜ್ಞಾನಿಕ ಸಹಾಯಕ ಮಲ್ಲಿಕಾರ್ಜುನ, ಕ್ಷೇತ್ರ ಸಹಾಯಕರು ಸೇರಿದಂತೆ ವಿವಿಧ ಅಧಿಕಾರಿ, ಸಿಬ್ಬಂದಿಗಳು, ವಿದ್ಯಾರ್ಥಿಗಳು ಇದ್ದರು.

ಬಳ್ಳಾರಿ: ಕಾರ್ಯಕರ್ತರೇ ಪಕ್ಷದ ಜೀವಾಳ

ಬಳ್ಳಾರಿ: ಕಾರ್ಯಕರ್ತರೇ ಪಕ್ಷದ ಜೀವಾಳ, ಬರುವ ದಿನಗಳಲ್ಲಿ ಜಿ. ಪಂ. ಹಾಗೂ ತಾ.ಪಂ. ಚುನಾ ವಣೆ ಬರಲಿದ್ದು, ಪ್ರತಿಯೊಬ್ಬ ಕಾರ್ಯ ಕರ್ತರು ತಳಮಟ್ಟದಿಂದ ಪಕ್ಷ ಸಂಘಟನೆಗೆ ಮುಂದಾಗಬೇಕು, ಪಕ್ಷವನ್ನು ಅಧಿಕಾರಕ್ಕೆ ತರಲು ಶ್ರಮಿಸಬೇಕು.ಎಂದು ಜೆಡಿಎಸ್ ಜಿಲ್ಲಾಧ್ಯಕ್ಷ ಮೀನಳ್ಳಿ ತಾಯಣ್ಣ ಅವರು ಹೇಳಿ ದರು. ನಗರದ ಜೆಡಿಎಸ್ ಜಿಲ್ಲಾ ಕಚೇರಿಯಲ್ಲಿ ಭಾನುವಾರ ಹಮ್ಮಿಕೊಂ ಡಿದ್ದ ಪಕ್ಷಕ್ಕೆ ಸೇರ್ಪಡೆ ಹಾಗೂ ಪದಾಧಿಕಾರಿಗಳ ಸಭೆಗೆ ಚಾಲನೆ ನೀಡಿ ಮಾತನಾ ಡಿದರು. ಪದಾಧಿಕಾ ರಿಗಳು ವಿಸಿಟಿಂ ಗ್ ಕಾರ್ಡ್ ಗೆ ಸೀಮಿತರಾ ಗದೆ ಪ್ರತಿ ಯೊ ಬ್ಬರೂ ಎಲ್ಲರನ್ನೂ ವಿಶ್ವಾಸಕ್ಕೆ ತೆಗೆದುಕೊಂಡು ಪಕ್ಷ ಸಂಘಟನೆಗೆ ಮುಂದಾಗಬೇಕು ಎಂದು ಕರೆ ನೀಡಿದರು. ಬಿಜೆಪಿ ಹಾಗೂ ಜೆಡಿ ಎಸ್ ಮೈತ್ರಿ ಇರುವ ದರಿಂದ ಕಾರ್ಯ ಕರ್ತರಿಗೆ ಒಳ್ಳೆಯ ಅವಕಾಶಗಳು ಹೆಚ್ಚಿವೆ, ಜಿಲ್ಲೆಯ ಸಿರುಗುಪ್ಪ, ಕಂಪ್ಲಿ, ಕುರುಗೋ ಡು, ಸಂಡೂರು ಹಾಗೂ ಬಳ್ಳಾರಿ ಕ್ಷೇತ್ರಗಳಲ್ಲಿ ಜಿ.ಪಂ.ಹಾಗೂ ತಾ.ಪಂ .ಸದಸ್ಯರು ಅತಿಹೆಚ್ಚು ಗೆಲ್ಲುವ ಮೂಲಕ ನಮ್ಮೆಲ್ಲರ ಶಕ್ತಿ ಹೆಚ್ಚಿಸ ಬೇಕು. ನಿಮ್ಮೊಂದಿಗೆ ನಾವಿದ್ದೇ ವೆ, ಅಕ್ರಮ, ಅವ್ಯವಹಾರ ಕಂಡು ಬಂದಲ್ಲಿ ಖಂಡಿಸಿ ಹೋರಾಟ ಕ್ಕಿಳಿಯರಿ, ನಿಮ್ಮೊಂದಿಗೆ ನಾವಿದ್ದೇವೆ ಎಂದು ಕಾರ್ಯಕರ್ತರಿಗೆ ಶಕ್ತಿ ತುಂಬಿದರು. ಅಂಗನವಾಡಿಗಳಲ್ಲಿ ಮಕ್ಕಳಿಗೆ ಸೇರಬೇಕಾದ ಆಹಾರದ ಪ್ಯಾಕೆಟ್ ಗಳು, ಆಹಾರದ ಕಿಟ್ ಗಳು ಅವಧಿ ಮೀರಿದ್ದು ಎಂದು ಕಂಡು ಬಂದಿದೆ. ಕೂಡಲೇ ಸಂಬಂ ಧಿಸಿದ ಇಲಾಖೆ ಮೇಲಧಿಕಾರಿಗಳು ಕಠಿಣ ಕ್ರಮಕ್ಕೆ ಮುಂದಾಗಬೇಕು. ಇಂತಹ ಪದಾ ರ್ಥಗಳು ಮಕ್ಕಳ ಹೊಟ್ಟೆ ಸೇರಿದರೆ ಗತಿಯೇನು ಎಂದು ಪ್ರಶ್ನಿಸಿದರು. ಸರ್ಕಾರ ಮಕ್ಕಳೊ ಂದಿಗೆ ಚೆಲ್ಲಾಟವಾ ಡುವು ದು ಸರಿ ಯಲ್ಲ, ಕೂಡಲೇ ಯಾರೇ ನಿರ್ಲಕ್ಷ್ಯ ವಹಿಸಿರಲಿ ಎಲ್ಲರ ವಿರುದ್ಧ ಕಠಿಣ ಕ್ರಮಕ್ಕೆ ಮುಂದಾ ಗಬೇಕು ಎಂದು ಒತ್ತಾಯಿಸಿದರು. ಸಿರುಗುಪ್ಪ ತಾಲೂ ಕಿನ ಯುವ ಮುಖಂಡ ಬಿ.ಗಿರೀಶ್ ಅವರು ಪಕ್ಷ ಸೇರ್ಪಡೆಯಾಗಿದ್ದು, ಮತ್ತಷ್ಟು ಶಕ್ತಿ ಬಂದಂತಾಗಿದೆ. ಅವರನ್ನು ಬರುವ ದಿನಗಳಲ್ಲಿ ತಾಲೂಕು ಅಧ್ಯಕ್ಷರನ್ನಾಗಿ ನೇಮಕ ಮಾಡಲಾಗುವುದು. ಕ್ಷೇತ್ರ ದಲ್ಲಿ ಎಲ್ಲರನ್ನು ವಿಶ್ವಾಸಕ್ಕೆ ತೆಗೆದು ಕೊಂಡು ಪಕ್ಷವನ್ನು ಬಲಿಷ್ಠಗೊ ಳಿಸಬೇಕು ಎಂದು ಕರೆ ನೀಡಿದರು.

ಪಕ್ಷ ಸೇರ್ಪಡೆ ಹಾಗೂ ನೂತನ ಪದಾಧಿಕಾರಿಗಳಿಗೆ ಆದೇಶ ಪತ್ರ ವಿತರಣೆ: ಯುವ ಮುಖಂಡ ಗಿರೀಶ್ ಅವರ ನೇತೃ ತ್ವದಲ್ಲಿ ವಿವಿಧ ಪಕ್ಷಗಳನ್ನು ತೊರೆದು ಸುಮಾರು ಮುಖಂಡರು ಹಾಗೂ ಕಾರ್ಯ ಕರ್ತರು ಜೆಡಿಎಸ್ ಜಿಲ್ಲಾಧ್ಯಕ್ಷ ಮೀನಳ್ಳಿ ತಾಯಣ್ಣ ಅವರ ನೇತೃ ತ್ವದಲ್ಲಿ ಸೇರ್ಪಡೆಯಾದರು. ಪಕ್ಷದ ಬಾವುಟ ನೀಡಿ ಗಣ್ಯರು ಶುಭ ಹಾರೈಸಿದರು. ಈ ವೇಳೆ ನೂತನವಾಗಿ ನೇಮಕಗೊಂಡ, ಪದಾಧಿಕಾರಿಗಳಿಗೆ ಮೀನಳ್ಳಿ ತಾಯಣ್ಣ ಅವರು ನೇಮಕಾತಿ ಆದೇಶ ಪತ್ರವನ್ನು ವಿತರಿಸಿದರು. ಸಾಮಾಜಿಕ ಜಾಲತಾ ಣದ ಜಿಲ್ಲಾಧ್ಯಕ್ಷರಾಗಿ ರವಿ ಕುಮಾರ್ ಮೀನಳ್ಳಿ, ಕಂಪ್ಲಿ ತಾಲೂಕು ಪ್ರಧಾನ ಕಾರ್ಯದರ್ಶಿಯಾಗಿ ಜಗದೀಶ್ ಪೂರ್ಜಾ, ಅದೇ ರೀತಿ ತಾಲೂಕು ಉಪಾಧ್ಯಕ್ಷರಾಗಿ ಕೆರೆಕೇರಿ ದೊಡ್ಡಪ್ಪ ಅವರಿಗೆ ಮೀನಳ್ಳಿ ತಾಯಣ್ಣ ಅವರು ನೇಮಕಾತಿ ಆದೇಶ ಪತ್ರ ವಿತರಿಸಿ ಶುಭ ಹಾರೈಸಿ, ಪ್ರತಿಯೊ

ಅಶ್ವಿನಿ ಅತ್ಯಾಚಾರ ಕೊಲೆ ಆರೋಪಿಗಳಿಗೆ ಗಲ್ಲು ಶಿಕ್ಷೆ ವಿಧಿಸಿ ಕುಟುಂಬಕ್ಕೆ ಸೌಕರ್ಯ ಒದಗಿಸಿ- ಡಾ.ಪೂಜಾ ರಮೇಶ್

ರಾಯಚೂರು. ಅಶ್ವಿನಿ ಸಾವಿಗೆ ಕಾರಣರಾದ ಆರೋಪಿಗಳಿಗೆ ಗಲ್ಲು ಶಿಕ್ಷೆ ಆಗಬೇಕು ಅಶ್ವಿನಿ ಕುಟುಂಬಕ್ಕೆ ನ್ಯಾಯ ಬೇಕು ಅಶ್ವಿನಿ ಕುಟುಂಬಕ್ಕೆ ರಕ್ಷಣೆ ಬೇಕು ಸರ್ಕಾರಿ ನೌಕರಿ ಅವರ ಮನೆಯವರಿಗೆ ನೀಡಬೇಕು ಎಂದು ಚಿತ್ರನಟಿ ಸಮಾಜ ಸೇವೆಗೆ ಹೋರಾಟಗಾರ್ತಿ ಡಾ.ಪೂಜಾ ರಮೇಶ್ ಮಾತನಾಡಿದರು

ಫಾತಿಮಾ ಹುಸೇನ್ ಫೌಂಡೇಶನ್ ವಸಂತ ಲಕ್ಷ್ಮಿ ಫೌಂಡೇಶನ್ ಹಾಗೂ ದಲಿತ ಸೇನೆ ಮತ್ತು ಕನ್ನಡ ಪರ ಸಂಘಟನೆಗಳು ರಾಯಚೂರು ಟಿಪ್ಪು ಸುಲ್ತಾನ್ ಉದ್ಯಾನವನದಲ್ಲಿ ಹಮ್ಮಿಕೊಂಡಿದ್ದ ಅಶ್ವಿನಿ ಸಾವಿಗೆ ನ್ಯಾಯ ಬೇಕೆನ್ನುವ ಪ್ರತಿಭಟನೆಯಲ್ಲಿ ಭಾಗವಹಿಸಿ ಮಾತನಾಡಿದರು. ಉತ್ತರ ಭಾರತದಲ್ಲಿ ಅತ್ಯಾಚಾರ ಕೊಲೆಗಳು ನಡೆಯುತ್ತಿದ್ದವು ಈಗ ನಮ್ಮ ಸುತ್ತಮುತ್ತ ನಡೆಯುತ್ತಿರುವುದು ನಿಜಕ್ಕೂ ಸೂಚನೆ ಸಂಗತಿ ಸ್ವಾತಂತ್ರ್ಯ ಸಿಟಿ 80 ವರ್ಷ ಆದರೂ ನಮಗೆ ಮಹಿಳೆಯರಿಗೆ ಇನ್ನೂ ಸ್ವಾತಂತ್ರ್ಯ ಇಲ್ಲ ಈ ನೆಲದಲ್ಲಿ ಸರ್ಕಾರ ಈ ನಿಟ್ಟಿನಲ್ಲಿ ಗಂಭೀರವಾಗಿ ಮಹಿಳೆಯರಿಗೆ ರಕ್ಷಣೆ ನೀಡಬೇಕು ಮಹಿಳೆಯರ ಮೇಲೆ ನಿರಂತರ ದೌರ್ಜನಗಳು ತಪ್ಪಲಿ ಎಂದು ಪೂಜಾ ರಮೇಶ್ ಹೇಳಿದರು

ಕನ್ನಡದ ಖ್ಯಾತ ಚಿತ್ರನಟ ಸಂಗೀತ ನಿರ್ದೇಶಕ ವಿ ಮನೋಹರ್ ಅವರು ಮಾತನಾಡಿ ಮಹಿಳೆಯರನ್ನು ಗೌರವಿಸಬೇಕು

ಇಂಥ ನೆಲದಲ್ಲಿ ಮಹಿಳೆಯರ ಮೇಲೆ ಅತ್ಯಾಚಾರ ಕೊಲೆಗಳು ನಡೆಯು ವುದು ನಿಜಕ್ಕೂ ದುಃಖಕರ ಸಂಗತಿ. ಮಹಿಳೆಯರಿಗೆ ರಕ್ಷಣೆ ಅತ್ಯವಶ್ಯವಿದೆ ಎಂದು ಮಾತನಾಡಿದರು

ಈ ಸಂದರ್ಭದಲ್ಲಿ ವಸಂತ ಲಕ್ಷ್ಮಿ ಫೌಂಡೇಶನ್ ಅಧ್ಯಕ್ಷರಾದ ಡಾ. ಪೂಜಾ ರಮಶ್. ಫಾತಿಮಾ ಹುಸೇನ್ ಫೌಂಡೇಶನ್ ಅಧ್ಯಕ್ಷರಾದ ಡಾ. ಫಾತಿಮಾ ಹುಸೇನ್. ಹೋರಾಟಗಾರ ಮಾರುತಿ ಬಡಿಗೇರ್.ದಲಿತ ಸೇನೆಯ ಮುಖಂಡರಾದ ಜಾವೀದ್ ಖಾನ್ ಮಾನ್ವಿ.ಆಲಂ ಗಣಿ.

ಶಾಲಂ. ಚಿರಂಜೀವಿ ಯಾದವ್ ವೀರೇಶ್ ಮ್ಯಾದರ್ ತಿಮ್ಮಪ್ಪ ಪೋತಗಲ್. ತಾಯಪ್ಪ. ಇಂದಿರಾ. ಭಾರತಿ ಹಿರೇ ಮಠ ಬಡೆಸಾಬ. ಅಂಜಲಿ ರಾಮ್ ಇನ್ನಿತರರಿದ್ದರು.

ಕೋಟ್ಪಾ ಕಾಯ್ದೆ ಕುರಿತು ಕಾರ್ಯಗಾರ:ತಂಬಾಕು ಮುಕ್ತ ಸಮಾಜ ನಿರ್ಮಾಣಕ್ಕೆ ಒಟ್ಟಾಗಿ ದುಡಿಯೋಣ-ಡಾ.ಎಸ್.ಡಿ.ಶರಣಪ್ಪ

ಕಲಬುರಗಿ,ಸೆ.7: ತಂಬಾಕು,ಗುಟ್ಕಾ, ಜರ್ದಾ ಸೇವನೆ ಆರೋಗ್ಯಕ್ಕೆ ಹಾನಿಕಾರಕವಾಗಿದ್ದು, ತಂಬಾಕು ಮುಕ್ತ ಸಮಾಜ ನಿರ್ಮಾಣಕ್ಕೆ ನಾವೆಲ್ಲರು ಒಟ್ಟಾಗಿ ದುಡಿಯೋಣ ಎಂದು ಕಲಬುರಗಿ ನಗರ ಪೊಲೀಸ್ ಆಯುಕ್ತ ಡಾ.ಎಸ್.ಡಿ. ಶರಣಪ್ಪ ಪೊಲೀಸ್ ಅಧಿಕಾರಿಗಳಿಗೆ ಕರೆ ನೀಡಿದರು.

ಇತ್ತೀಚಿಗೆ ಕಲಬುರಗಿ ನಗರದ ಪೊಲೀಸ್ ಆಯುಕ್ತರ ಕಚೇರಿ ಸಭೆ ಸಭಾಂಗಣದಲ್ಲಿ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಜಿಲ್ಲಾ ತಂಬಾಕು ನಿಯಂತ್ರಣ ಕೋಶ ಮತ್ತು ಪೊಲೀಸ್ ಇಲಾಖೆ ಸಂಯುಕ್ತಾಶ್ರಯದಲ್ಲಿ ಆಯುಕ್ತಾಲಯ ವ್ಯಾಪ್ತಿಯ ಪೊಲೀಸ್ ಅಧಿಕಾರಿಗಳಿಗೆ ಆಯೋಜಿಸಿದ ಕೋಟ್ಪಾ ತಿದ್ದುಪಡಿ ಕಾಯ್ದೆ-2024 ನಿಬಂಧನೆಗಳು, ಕಇಅಂ-2019 ಮತ್ತು ಇತರ ಕಾನೂನುಗಳ ಕುರಿತ ಸಂವೇದನಾಶೀಲ ಕಾರ್ಯಾಗಾರ ಉದ್ಘಾಟಿಸಿ ಅವರು ಮಾತನಾಡಿದರು.

ತಂಬಾಕು ಉತ್ಪನ್ನಗಳ ಸೇವನೆಯಿಂದ ಮಾರಕ ಕ್ಯಾನ್ಸರ್ ಗೆ ತುತ್ತಾಗಿ ನಾವೇ ರೋಗಕ್ಕೆ ಆಹ್ವಾನ ನೀಡಿದಂತಾಗುತ್ತದೆ. ಒಮ್ಮೆ ರೋಗ ದೇಹಕ್ಕೆ ಅಂಟಿಕೊಂಡಲ್ಲಿ ಇಡೀ ಕುಟುಂಬ ಆರ್ಥಿಕವಾಗಿ, ಮಾನಸಿಕವಾಗಿ ಸಂಕಷ್ಟಕ್ಕೆ ಎಡೆ ಮಾಡಿಕೊಡುತ್ತದೆ. ಹೀಗಾಗಿ ನಮ್ಮ ಪೊಲೀಸ್ ಅಧಿಕಾರಿಗಳು ಈ ಬಗ್ಗೆ ಸಮಾಜದಲ್ಲಿ ಅರಿವು ಮೂಡಿಸಬೇಕು ಮತ್ತು ಸ್ವತ: ಸಹ ಯಾವುದೇ ಗುಟಕಾ ಪದಾರ್ಥಗಳ ಸೇವನೆಗೆ ಬಲಿಯಾಗಬಾರದು ಎಂದು ಕಿವಿಮಾತು ಹೇಳಿದರು.

ಕೋಟ್ಪಾ ಕಾಯ್ದೆಯ ಪ್ರಕಾರ ಸಾರ್ವಜನಿಕರ ಸ್ಥಳಗಳಲ್ಲಿ, ಶಿಕ್ಷಣ ಸಂಸ್ಥೆಗಳ ಆವರಣದಲ್ಲಿ, ರಸ್ತೆಗಳಲ್ಲಿ ಧೂಮಪಾನ ಮಾಡುವುದು ಮತ್ತು ಉಗುಳುವುದು ಕಂಡುಬಂದಲ್ಲಿ ನಿರ್ದಾಕ್ಷಿಣ್ಯವಾಗಿ ಕಾನೂನು ಕ್ರಮ ಜರುಗಿಸಬೇಕು. ಸಾರ್ವಜನಿಕ ಸ್ಥಳಗಳಲ್ಲಿ ಧೂಮಪಾನ ನಿಯಂತ್ರಣ, ಆಪ್ರಾಪ್ತ ವಯಸ್ಕರಿಗೆ ತಂಬಾಕು ಉತ್ಪನ್ನಗಳ ಮಾರಾಟಕ್ಕೆ ಇರುವ ನಿರ್ಬಂಧಗಳು ಹಾಗೂ ತಂಬಾಕು ಉತ್ಪನ್ನಗಳ ಜಾಹೀರಾತು ಮತ್ತು ಪ್ರಚಾರದ ಮೇಲಿನ ನಿಯಂತ್ರಣದ ಕುರಿತು ಪೊಲೀಸ್ ಅಧಿಕಾರಿಗಳು ಅರಿತು ಅದರಂತೆ ಕಾರ್ಯಚರಣೆ ನಡೆಸಬೇಕೆಂದರು.

ವಿಶೇಷವಾಗಿ ಉತ್ತರ ಕರ್ನಾಟಕ ಭಾಗದಲ್ಲಿ ಜನ ಹೆಚ್ಚು ಸಿಗರೇಟ್, ತಂಬಾಕು, ಗುಟಕಾದಂತಹ ಮಾದಕ ವಸ್ತುವನ್ನು ಸೇವಿಸುತ್ತಿದ್ದು, ಇದು ಸಾರ್ವಜನಿಕರ ಆರೋಗ್ಯದ ಮೇಲೆ ದುಷ್ಪರಿಣಾಮ ಬೀರುತ್ತದೆ. ನಿಮ್ಮ ಆರೋಗ್ಯ ರಕ್ಷಣೆ ಜೊತೆಗೆ ಬೇರೆಯವರ ಆರೋಗ್ಯಕರ ಜೀವನಕ್ಕೂ ಈ ಕೆಟ್ಟ ಹವ್ಯಾಸ ತ್ಯಜಿಸಬೇಕು ಎಂದು ಕರೆ ನೀಡಿದ ಅವರು, ಇತ್ತೀಚೆಗೆ ನಗರ ಪ್ರದೇಶದಲ್ಲಿ ಎಲೆಕ್ಟ್ರಾನಿಕ್ ಸಿಗರೇಟ್‌ಗಳ ಹಾವಳಿ ಹೆಚ್ಚಾಗುತ್ತಿದ್ದು, ಇದರ ಉತ್ಪಾದನೆ, ಆಮದು, ಮಾರಾಟ, ವಿತರಣೆ, ಸಂಗ್ರಹಣೆ ಮತ್ತು ಜಾಹೀರಾತಿಗೆ ಸಂಬಂಧಿಸಿದ ನಿಷೇಧಗಳ ಕುರಿತು ಅಧಿಕಾರಿಗಳಿಗೆ ಸಂಕ್ಷಿಪ್ತವಾಗಿ ತಿಳಿಹೇಳಿದರು.

ಇನ್ನು ಪೊಲೀಸ್ ಆಯುಕ್ತಾಲಯ ವ್ಯಾಪ್ತಿಯ ಎಲ್ಲ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ಅಜಿಖಿಕಂ ಕಾಯ್ದೆ ಉಲ್ಲಂಘಿಸಿ ಧೂಮಪಾನ ಮಾಡಿದಲ್ಲಿ ಮೊದಲು 500 ರೂ. ದಂಡ ವಿಧಿಸಲಾಗುತ್ತಿತ್ತು. ಇದೀಗ 1,000 ರೂ. ದಂಡ ಹಾಕಲಾಗುತ್ತಿದ್ದು, ಇದನ್ನು ಜಾಗೃತಿ ಮೂಡಿಸಲು ಪೋಸ್ಟರ್ ಅಳವಡಿಸಿ ಅದರಂತೆ ದಂಡ ವಸೂಲಿ ಮಾಡಬೇಕೆಂದು ಅಧಿಕಾರಿಗಳಿಗೆ ಡಾ.ಎಸ್.ಡಿ.ಶರಣಪ್ಪ ಸೂಚಿಸಿದರು.

ನವದೆಹಲಿಯ ವೈಟಲ್ ಸ್ಟ್ರಾಟರ್ಜಿ ನಿರ್ದೇಶಕ ಡಾ.ಅಮಿತ್ ಯಾದವ ಅವರು, ಅಜಿಖಿಕಂ-2003ರ ರಾಜ್ಯ ತಿದ್ದುಪಡಿ-2024ರ ಪ್ರಮುಖ ಅಂಶಗಳು ಮತ್ತು ಎಲೆಕ್ಟ್ರಾನಿಕ್ ಸಿಗರೇಟ್‌ಗಳ ಉತ್ಪಾದನೆ, ಆಮದು, ಮಾರಾಟ, ವಿತರಣೆ, ಸಂಗ್ರಹಣೆ ಮತ್ತು ಜಾಹೀರಾತಿಗೆ ಸಂಬಂಧಿಸಿದ ನಿಷೇಧಗಳ ಕುರಿತು ಅಧಿಕಾರಿಗಳಿಗೆ ಸವಿಸ್ತಾರವಾಗಿ ವಿವರಿಸಿದರು.

ಕಾರ್ಯಾಗಾರಕ್ಕೆ ಸಂಪನ್ಮೂಲ ವ್ಯಕ್ತಿಗಳಾಗಿ ಆಗಮಿಸಿದ ಎಸ್.ಎಸ್.ಎಲ್ ಕಾನೂನು ಮಹಾವಿದ್ಯಾಲಯದ ಪ್ರಾಂಶುಪಾಲರಾದ ಡಾ. ಮಹೇಶ್ವರಿ ಹಿರೇಮಠ್ ಮತ್ತು ರಾಜ್ಯ ತಂಬಾಕು ನಿಯಂತ್ರಣ ಕೋಶದ ವಿಭಾಗೀಯ ಸಂಯೋಜಕ ಮಹಾಂತೇಶ ಉಳ್ಳಾಗಡ್ಡಿ ಅವರು ಕೋಟ್ಪಾ ಕಾಯ್ದೆ-2003ಯಡಿ ಸಾರ್ವಜನಿಕ ಆರೋಗ್ಯ ರಕ್ಷಣೆ ಕುರಿತು ಮಾತನಾಡಿದರು.

ಜಾಗೃತಿ ಪೋಸ್ಟರ್ ಬಿಡುಗಡೆ: ಇದೇ ಸಮಯದಲ್ಲಿ ಕೋಟ್ಪಾ ಕಾಯ್ದೆ ಆಡಿಯಲ್ಲಿ ಸಾರ್ವಜನಿಕರಿಗೆ ಸ್ಥಳದಲ್ಲಿಯೇ ದಂಡ ವಿಧಿಸುವ ಕುರಿತು ಜಾಗೃತಿ ಮೂಡಿಸುವ ಪೋಸ್ಟರಗಳನ್ನು ಪೊಲೀಸ್ ಆಯುಕ್ತ ಡಾ.ಎಸ್.ಡಿ.ಶರಣಪ್ಪ ಬಿಡುಗಡೆಗೊಳಿಸಿದರು.

ಕಾರ್ಯಕ್ರಮದಲ್ಲಿ ಡಿ.ಸಿ.ಪಿ (ಲಾ ಆರ್ಡರ್) ಶಾಲೂ, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ. ಶರಣಬಸಪ್ಪ ಕ್ಯಾತನಾಳ್, ಜಿಲ್ಲಾ

ಗಣೇಶ ಹಬ್ಬ:ಶಾಂತಿಯುತ ಮತ್ತು ಸೌಹಾರ್ದತೆಯಿಂದ ಆಚರಿಸಿ-ಇಕ್ರಂ ಶರೀಫ್

ಕಲಬುರಗಿ,ಸೆ.07: ಕಲಬುರಗಿ ಜಿಲ್ಲೆಯಾದ್ಯಂತ ಗೌರಿ-ಗಣೇಶ ಚತುರ್ಥಿ ಹಬ್ಬವನ್ನು ಶಾಂತಿಯುತ ಹಾಗೂ ಸೌಹಾರ್ದತೆಯಿಂದ ಆಚರಿಸಬೇಕೆಂದು ಜಿಲ್ಲಾಧಿಕಾರಿ ಇಕ್ರಂ ಶರೀಫ್ ಹೇಳಿದರು.

ಶುಕ್ರವಾರ ಇಲ್ಲಿನ ಜಿಲ್ಲಾಧಿಕಾರಿ ಕಚೇರಿಯಲ್ಲಿ ನಡೆದ ಗಣೇಶ ಚತುರ್ಥಿ ಹಬ್ಬದ ಶಾಂತಿ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಇದೇ ಸೆಪ್ಟೆಂಬರ್ 14 ರಿಂದ 5ನೇ, 9ನೇ, 11ನೇ ಹಾಗೂ 21ನೇ ದಿನಗಳ ಗಣಪನ ಮೂರ್ತಿ ಪ್ರತಿಷ್ಠಾಪನೆ ನಡೆಯಲಿದ್ದು, ಜಿಲ್ಲೆಯಾದ್ಯಂತ ಎಲ್ಲಿಯೂ ಶಾಂತಿ ಕದಡುವಂತೆ ಯಾವುದೇ ಅಹಿತಕರ ಘಟನೆಗೆ ಅವಕಾಶ ನೀಡದೆ ಸಂಭ್ರಮದಿಂದ ವಿಘ್ನ ವಿನಾಯಕನ ಹಬ್ಬ ಆಚರಿಸುವಂತೆ ಆಯೋಜಕರಿಗೆ ಸೂಚಿಸಿದರು.

ಗಣೇಶ ಮೂರ್ತಿ ಪ್ರತಿಷ್ಠಾಪನೆಗೆ ಆಯೋಜಕರಿಗೆ ಸುಲಭವಾಗಿ ಅನುಮತಿ ಪಡೆಯಲು ಕಲಬುರಗಿ ನಗರಕ್ಕೆ ಸೀಮಿತವಾಗಿ ಮಹಾನಗರ ಪಾಲಿಕೆಯ ಟೌನ್ ಹಾಲ್ ಹಾಗೂ ಆಯಾ ತಾಲೂಕುಗಳಲ್ಲಿ 'ಸಿಂಗಲ್ ವಿಂಡೋ' ಸಿಸ್ಟಮ್ ತೆರೆಯಲಾಗುತ್ತದೆ. ಆಯೋಜಕರು ಇಲ್ಲಿಯೇ ಅರ್ಜಿ ಸಲ್ಲಿಸಿ ಒಂದೇ ಸೂರಿನಡಿ ಎಲ್ಲದಕ್ಕೂ ಅನುಮತಿ ಪಡೆಯಬಹುದಾಗಿದೆ. ಸಿಂಗಲ್ ವಿಂಡೋ ಸಿಸ್ಟಮ್‌ನಲ್ಲಿ ಸಂಬಂಧ ಪಟ್ಟ ಎಲ್ಲಾ ಇಲಾಖೆಗಳ ಪ್ರತಿನಿಧಿಗಳು ಹಾಜರಿದ್ದು, ತ್ವರಿತಗತಿಯಲ್ಲಿ ಅನುಮತಿ ನೀಡಲು ನೆರವಾಗಬೇಕೆಂದು ಅಧಿಕಾರಿಗಳಿಗೆ ಡಿ.ಸಿ. ನಿರ್ದೇಶನ ನೀಡಿದರು.

ಹಬ್ಬದ ಸಂದರ್ಭದಲ್ಲಿ ಎಲ್ಲಿಯೂ ನೀರಿನ ಅಭಾವ ಉಂಟಾಗದಂತೆ ಮತ್ತು ವಿದ್ಯುತ್ ವ್ಯತ್ಯಯವಾಗದಂತೆ ನೋಡಿಕೊಳ್ಳಬೇಕು. ನಗರದಲ್ಲಿ ಮೆರವಣಿಗೆ ಮಾರ್ಗದಲ್ಲಿ ಅವಶ್ಯವಿದ್ದಕಡೆ ಮರದ ರೆಂಬೆಗಳನ್ನು ಕತ್ತರಿಸುವುದು ಮತ್ತು ರಸ್ತೆಯಲ್ಲಿನ ಗುಂಡಿಗಳನ್ನು ಮುಚ್ಚಿ ಸುಗಮ ಮೆರವಣಿಗೆಗೆ ಅವಕಾಶ ಮಾಡಿಕೊಡಬೇಕು. ನಿರ್ದಿಷ್ಟ ಸ್ಥಳದಲ್ಲಿ ತಾತ್ಕಾಲಿಕ ಮೊಬೈಲ್ ವಿಸರ್ಜನಾ ತೊಟ್ಟಿಗಳ' ವ್ಯವಸ್ಥೆ ಮಾಡುವಂತೆ ಕಲಬುರಗಿ ಮಹಾನಗರ ಪಾಲಿಕೆ ಆಯುಕ್ತರಿಗೆ ಹಾಗೂ ತಾಲೂಕಾ ಹಂತದ ಇತರೆ ಅಧಿಕಾರಿಗಳಿಗೆ ಸೂಚಿಸಿದ ಡಿ.ಸಿ. ಅವರು ಸುಗಮ ಸಂಚಾರಕ್ಕೆ ಹೆಚ್ಚುವರಿ ಗೃಹರಕ್ಷಕ ಸಿಬ್ಬಂದಿ ಯನ್ನು ನಿಯೋಜಿಸುವಂತೆಯೂ ಪೊಲೀಸ್ ಇಲಾಖೆಗೆ ಸೂಚಿಸಿದರು.

ಪರಿಸರ ಸ್ನೇಹಿ ಗಣಪನನ್ನು ಪ್ರತಿಷ್ಠಾಪಿಸಿ: ಪಿ.ಓ.ಪಿ ಹಾಗೂ ರಾಸಾಯನಿಕ ಬಣ್ಣದಿಂದ ತಯಾರಿಸಿದ ಗಣಪನ ಮೂರ್ತಿಗಳನ್ನು ನದಿ, ಕಾಲುವೆ, ಬಾವಿ ಮತ್ತು ಇತರೆ ಜಲಮೂಲಗಳಲ್ಲಿ ವಿಸರ್ಜಿಸುವುದರಿಂದ ನೀರು ಕಲುಷಿತಗೊಂಡು ಸಾಂಕ್ರಾಮಿಕ ರೋಗಗಳು ಹರಡುವ ಜತೆಗೆ ಪರಿಸರಕ್ಕೆ ತೀವ್ರ ಹಾನಿಯಾಗುವು ದರಿಂದ ಇವುಗಳನ್ನು ನಿಷೇಧಿಸಲಾಗಿದೆ. ಹೀಗಾಗಿ ಜಿಲ್ಲೆಯ ಸಾರ್ವಜನಿಕರು ಜೇಡಿಮಣ್ಣಿನಿಂದ ತಯಾರಿಸಿದ ಪರಿಸರ ಸ್ನೇಹಿ ಗಣಪತಿ ವಿಗ್ರಹಗಳನ್ನು ಮಾತ್ರ ಪ್ರತಿಷ್ಠಾಪಿಸುವ ಮೂಲಕ ಪರಿಸರ ಸಂರಕ್ಷಣೆಗೂ ಕೈಜೋಡಿಸಬೇಕೆಂದು ಜಿಲ್ಲಾಧಿಕಾರಿ ಇಕ್ರಂ ಶರೀಫ್ ಮನವಿ ಮಾಡಿದರು.

ಕಲಬುರಗಿ ನಗರ ಪೊಲೀಸ್ ಆಯುಕ್ತ ಡಾ. ಶರಣಪ್ಪ ಎಸ್.ಡಿ. ಮತ್ತು ಎಸ್.ಪಿ. ಅಡ್ಡೂರು ಶ್ರೀನಿವಾಸುಲು ಮಾತನಾಡಿ, ಕಲಬುರಗಿ ನಗರ ಮತ್ತು ಜಿಲ್ಲೆಯಾ ದ್ಯಂತ ಪ್ರತಿಯೊಂದು ಗಣೇಶ ಮಂಡಳಿಯು ಕಡ್ಡಾಯವಾಗಿ ಅನುಮತಿ ಪಡೆದು ಗಣೇಶನನ್ನು ಪ್ರತಿಷ್ಠಾಪನೆ ಮಾಡಬೇಕು. ಪೆಂಡಾಲ್ ಹಾಗೂ ಸುತ್ತಮುತ್ತಲಿನ ಪ್ರದೇಶಗಳಲ್ಲಿ ಹಗಲು-ರಾತ್ರಿ ಶಿಸ್ತು ಪರಿಪಾಲನೆಗಾಗಿ ಸ್ವಯಂಸೇವಕರನ್ನು ನಿಯೋಜಿಸಬೇಕು. ಪೆಂಡಾಲ್‌ಗಳಿಗೆ ಪೊಲೀಸ್ ಇಲಾಖೆಯಿಂದ ಡೇ ಮತ್ತು ನೈಟ್ ಪೆಟ್ರೋಲಿಂಗ್ ಮೂಲಕ ಬಿಗಿ ಪೊಲೀಸ್ ಬಂದೋಬಸ್ತ್ ಕಲ್ಪಿಸಲಾಗುವುದು. ಪೆಂಡಾಲ್‌ಗಳಲ್ಲಿ ಸೂಕ್ತ ಬೆಳಕಿನ ವ್ಯವಸ್ಥೆ, ಬೆಂಕಿ ಅವಘಡ ತಡೆಯುವ ಸುರಕ್ಷತಾ ಕ್ರಮಗಳು ಹಾಗೂ ಮುಂಜಾಗ್ರತೆಯಾಗಿ ಸಿ.ಸಿ.ಟಿ.ವಿ ಕ್ಯಾಮೆರಾಗಳನ್ನು ಕಡ್ಡಾಯವಾಗಿ ಅಳವಡಿಸಿಕೊಳ್ಳುವಂತೆ ಸಲಹೆ ನೀಡಿದ ಅವರು,. ಶೇ.65ರಷ್ಟು ಮೂರ್ತಿಗಳು 5ನೇ ದಿನದಂದು ವಿಸರ್ಜನೆ ಯಾಗುವುದರಿಂದ ಸಂಚಾರ ದಟ್ಟಣೆ ತಪ್ಪಿಸಲು ಮೆರವಣಿಗೆಯ ವೇಳೆ ಯಲ್ಲಿ ಮುಂಚಿತವಾಗಿ ಯೋಜಿತ ರೀತಿಯಲ್ಲಿ ಸಮಯ ಪರಿಪಾಲನೆ ಮಾಡಬೇಕು ಎಂದು ತಿಳಿಸಿದರು.

ಸುಳ್ಳು ಸುದ್ದಿಗೆ ಕಿವಿಗೊಡಬೇಡಿ: ಹಬ್ಬದ ಸಂದರ್ಭದಲ್ಲಿ ಕೆಲ ಕಿಡಿಗೇಡಿಗಳು ಸಾಮಾಜಿಕ ಮಾಧ್ಯಮಗಳಲ್ಲಿ ಹರಡುವ ಯಾವುದೇ ಸುಳ್ಳು ವದಂತಿಗಳಿಗೆ ಸಾರ್ವಜನಿಕರು ಕಿವಿಗೊಡಬಾರದು. ವಿವಾದಾತ್ಮಕ ಫ್ಲೆಕ್ಸ್/ಬ್ಯಾನರ್‌ಗಳನ್ನು ಅಳವಡಿಕೆ ಸಂಪೂರ್ಣವಾಗಿ ನಿಷೇಧಿಸಲಾಗಿದೆ. ಮದ್ಯಪಾನ ಮಾಡಿ ಹಬ್ಬದ ವಾತಾವರಣ ಕೆಡಿಸುವವರ ಮೇಲೆಯೂ ಪೊಲೀಸ್ ಇಲಾಖೆ ನಿಗಾ ವಹಿಸಲಿದೆ. ಸಾರ್ವಜನಿಕರು ಹಾಗೂ ಆಯೋಜ ಕರು ಯಾವುದೇ ತುರ್ತು ಪರಿಸ್ಥಿತಿ ಎದುರಿಸಲು ಸಹಾಯವಾಣಿ ಸಂಖ್ಯೆ 112 ಅಥವಾ ಸ್ಥಳೀಯ ಪೊಲೀಸ್ ಠಾಣೆಗೆ ಮಾಹಿತಿ ನೀಡಬೇಕು ಎಂದು ಮನವಿ ಮಾಡಿದರು.

54ನೇ ಉಪಕಾಲುವೆಗೆ ನೀರು ಹರಿಸಲು ಆಗ್ರಹಿಸಿ ಬೃಹತ್ ಪ್ರತಿಭಟನೆ

ಸಿಂಧನೂರು: ತುಂಗಭದ್ರಾ ಅಚ್ಚುಕಟ್ಟು ಪ್ರದೇಶದ 54ನೇ ಉಪಕಾಲುವೆಗೆ ಸಮರ್ಪಕವಾಗಿ ನೀರು ಹರಿಸುವಂತೆ ಆಗ್ರಹಿಸಿ ರೈತರು ತಾಲ್ಲೂಕಿನ ಜವಳಗೇರಾ ಗ್ರಾಮದ ಬಳಿ ಬೃಹತ್ ಪ್ರತಿಭಟನೆ ನಡೆಸಿದರು.

ಪ್ರತಿಭಟನೆಯಲ್ಲಿ ಮಾತನಾಡಿದ ಮಾಜಿ ಸಚಿವ ವೆಂಕಟರಾವ್ ನಾಡಗೌಡ, ತುಂಗಭದ್ರಾ ಅಚ್ಚುಕಟ್ಟು ಪ್ರದೇಶದ ರೈತರ ಹಿತಕಾಯುವ ಬದು ಐಸಿಸಿ ಸಭೆಯ ಅಧ್ಯಕ್ಷರಾಗಿರುವ ಸಚಿವ ಶಿವರಾಜ್ ತಂಗಡಗಿ ಅವರ ಕರ್ತವ್ಯ. ರೈತರು ತಮ್ಮ ಸಮಸ್ಯೆ ಹೇಳಿಕೊಳ್ಳಲು ಸಚಿವರ ಮನೆಗೆ ಬಂದಾಗ ಅವರನ್ನು ಹೊರಕ ಳಿಸಿ ಶಾಸಕರ ಬಳಿ ಹೋಗು ವಂತೆ ಹೇಳುವುದು ಸರಿಯಲ್ಲ. ರೈತರ ಸಮಸ್ಯೆ ಗಳಿಗೆ ಸ್ಪಂದಿಸದಿದ್ದರೆ ಸಚಿವರು ರಾಜೀನಾಮೆ ನೀಡಬೇಕು. ಇನ್ನು ಮುಂದೆ ರೈತರು ನಿಮ್ಮ ಮನೆ ಬಾಗಿಲಿಗೆ ಬರುವುದಿಲ್ಲ ಎಂದು ವಾಗ್ದಾಳಿ ನಡೆಸಿದರು.

ಕಾಲುವೆಗೆ ನೀರು ಹರಿಯದೆ ರೈತರು ಸಂಕಷ್ಟಕ್ಕೆ ಸಿಲುಕಿದ್ದಾರೆ. ಒಂದೆಡೆ ಬರದ ಪರಿಸ್ಥಿತಿ, ಮತ್ತೊಂದೆಡೆ ನೀರಿನ ಕೊರತೆಯಿಂದ ಬೆಳೆಗಳು ಒಣಗುವ ಆತಂಕ ಎದುರಾಗಿದೆ. ಇಂತಹ ಸಂದರ್ಭದಲ್ಲಿ ರಾಜ್ಯ ಸರ್ಕಾರ ರೈತರ ಸಮಸ್ಯೆಗಳನ್ನು ಗಂಭೀರವಾಗಿ ಪರಿಗಣಿಸುತ್ತಿಲ್ಲ ಎಂದು ಅವರು ಆರೋಪಿಸಿದರು.

ಐಸಿಸಿ ಸಭೆಯ ಅಧ್ಯಕ್ಷರಾಗಿರುವ ಸಚಿವ ಶಿವರಾಜ್ ತಂಗಡಗಿ ಅವರು ತಮ್ಮ ಜವಾಬ್ದಾರಿ ಯನ್ನು ಸಮರ್ಪಕವಾಗಿ ನಿರ್ವಹಿಸ ಬೇಕು. ಮೇಲ್ಭಾಗದ ರೈತರ ಹಿತಾ ಸಕ್ತಿಗೆ ಆದ್ಯತೆ ನೀಡುವ ಮೂಲಕ ಕೆಳಭಾಗದ ರೈತರ ಹಕ್ಕುಗಳಿಗೆ ಧಕ್ಕೆ ತರುವಂತಾಗಬಾರದು. ಈ ಕುರಿತು ಕೆಳಭಾಗದ ಶಾಸಕರು ಕೂಡ ಧ್ವನಿ ಎತ್ತಬೇಕು ಎಂದು ನಾಡಗೌಡ ಒತ್ತಾಯಿಸಿದರು.

54ನೇ ಉಪಕಾಲುವೆ ವ್ಯಾಪ್ತಿಯ ರೈತರಿಗೆ ತುಂಗಭದ್ರಾ ಜಲಾಶಯದ ಎಡದಂಡೆ ನಾಲೆಯ ಮೂಲಕ ಸಮರ್ಪಕ ಪ್ರಮಾಣದಲ್ಲಿ ನೀರು ಪೂರೈಸಬೇಕು ಸೇರಿದಂತೆ ವಿವಿಧ ಬೇಡಿಕೆಗಳನ್ನು ಈಡೇರಿಸುವಂತೆ ಆಗ್ರಹಿಸಿ ರೈತರು ತಹಸೀಲ್ದಾರರಿಗೆ ಮನವಿ ಸಲ್ಲಿಸಿದರು. ಪ್ರತಿಭಟನೆಯಲ್ಲಿ ವಿವಿಧ ರಾಜಕೀಯ ಪಕ್ಷಗಳ ಮುಖಂಡರು, ರೈತ ಸಂಘಟನೆಗಳ ಮುಖಂಡರು ಹಾಗೂ 54ನೇ ಉಪಕಾಲುವೆ ವ್ಯಾಪ್ತಿಯ ಸಾವಿರಾರು ರೈತರು ಭಾಗವಹಿಸಿದ್ದರು.

ಆಸ್ಪತ್ರೆಯಲ್ಲಿ ಬುರ್ಖಾ ಧರಿಸಿ ಬಂದ ಮಹಿಳೆಗೆ ಪೊಲೀಸ್ ಸಿಬ್ಬಂದಿ ಅವಮಾನಿಸಿದ್ದಾರೆ ಮುಧೋಳ ಬಲವಾಗಿ ಖಂಡನೆ

ಹುಬ್ಬಳ್ಳಿ:- ಮಹಾರಾಷ್ಟ್ರದ ಮುಂಬೈಯ

ಪ್ರಥಮ ಪಿಯುಸಿ ವಿದ್ಯಾರ್ಥಿಗಳಿಗೆ ಸ್ವಾಗತ; ನಿವೃತ್ತ ಮುಖ್ಯ ಶಿಕ್ಷಕರಿಗೆ ಬೀಳ್ಕೊಡುಗೆ

ಮುದಗಲ್: ಪಟ್ಟಣದ ಎಂ. ಗಂಗಣ್ಣ ಕಾಲೇಜು ಹಾಗೂ ಸಜ್ಜಲ ಶ್ರೀ ಪ್ರೌಢಶಾಲೆಯ ವತಿಯಿಂದ ಪ್ರಥಮ ಪಿಯುಸಿ ವಿದ್ಯಾರ್ಥಿಗಳ ಸ್ವಾಗತ ಹಾಗೂ ನಿವೃತ್ತ ಮುಖ್ಯ ಶಿಕ್ಷಕರಿಗೆ ಬೀಳ್ಕೊಡುಗೆ ಸಮಾರಂಭವನ್ನು ಶನಿವಾರ ಅದ್ದೂರಿಯಾಗಿ ಹಮ್ಮಿಕೊಳ್ಳಲಾಯಿತು.

ಲಿಂಗಸುಗೂರು ಹಾಲುಮತ ಅಭಿವೃದ್ಧಿ ಸಂಸ್ಥೆಯ ಅಧ್ಯಕ್ಷ ಶಿವಶಂಕರಗೌಡ ಗೌಡರ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿ, ಪ್ರಥಮ ಪಿಯುಸಿ ಜೀವನವು ವಿದ್ಯಾರ್ಥಿಗಳ ಶೈಕ್ಷಣಿಕ ಬದುಕಿನ ಅತ್ಯಂತ ಮಹತ್ವದ ಹಂತವಾಗಿದೆ. ಈ ಹಂತದಲ್ಲಿ ಪಠ್ಯಪುಸ್ತಕ ಜ್ಞಾನದ ಜೊತೆಗೆ ಜೀವ ನಾನುಭವ, ಶಿಸ್ತು, ಸಮಯದ ಮಹತ್ವ ಹಾಗೂ ಉತ್ತಮ ವ್ಯಕ್ತಿತ್ವವನ್ನು ಬೆಳೆಸಿ ಕೊಳ್ಳಬೇಕು. ಶಿಕ್ಷಣವೆಂದರೆ ಕೇವಲ ಅಂಕ ಗಳಿಸುವುದಲ್ಲ; ಉತ್ತಮ ವ್ಯಕ್ತಿಯಾಗಿ ರೂಪುಗೊಳ್ಳುವುದಾಗಿದೆ ಎಂದು ಹೇಳಿದರು.ಸರ್ಕಾರದ ವಿಶೇಷ ಕಾರ್ಯ ದರ್ಶಿ ಚಂದ್ರಶೇಖರ ಎಂ. ಗಂಗಣ್ಣ ಮಾತನಾಡಿ, ಕಾಲೇಜಿಗೆ ಕಾಲಿಟ್ಟಿರುವ ವಿದ್ಯಾರ್ಥಿಗಳು ಹೊಸ ಕನಸುಗಳೊಂದಿಗೆ ಮುಂದಡಿ ಇಡಬೇಕು. ಆ ಕನಸುಗಳನ್ನು ನನಸಾಗಿಸಲು ನಿರಂ ತರ ಪರಿಶ್ರಮ ಅತ್ಯಗತ್ಯ ಪ್ರತಿದಿನವೂ ಅಧ್ಯ ಯನಕ್ಕೆ ಸಮಯ ಮೀಸಲಿಟ್ಟು, ತರಗತಿಯಲ್ಲಿ ಗಮನವಿಟ್ಟು ಅರ್ಥ ವಾಗದ ವಿಷಯಗಳನ್ನು ಶಿಕ್ಷಕರಲ್ಲಿ ಕೇಳಿ ತಿಳಿದುಕೊಂಡು, ಕಲಿತದ್ದನ್ನು ಪುನರಾವರ್ತಿಸಬೇಕು ಎಂದು ಸಲಹೆ ನೀಡಿದರು.ಮೊಬೈಲ್ ಹಾಗೂ ಸಾಮಾಜಿಕ ಜಾಲತಾಣಗಳು ಅಧ್ಯಯನಕ್ಕೆ ಅಡ್ಡಿಯಾಗದಂತೆ ಎಚ್ಚರ ವಹಿಸಬೇಕು. ಮೊಬೈಲ್ ನಿಮ್ಮ ಕೈಯಲ್ಲೀರಲಿ: ನಿಮ್ಮ ಜೀವನ ಮೊಬೈಲ್ ಕೈಯಲ್ಲೀರಬಾರದು ಎಂದು ವಿದ್ಯಾರ್ಥಿಗಳಿಗೆ ಕಿವಿಮಾತು ಹೇಳಿದರು. ಕಳೆದುಹೋದ ಹಣ ವನ್ನು ಮತ್ತೆ ಸಂಪಾದಿ ಸಬಹುದು, ಆದರೆ ಕಳೆದುಹೋದ ಸಮಯ ವನ್ನು ಮರಳಿ ಪಡೆಯಲು ಸಾಧ್ಯವಿ ಲ್ಲ, ಆದ್ದರಿಂದ ಸಮಯದ ಮೌಲ್ಯ ಅರಿತುಕೊಂಡು ಗುರಿಯತ್ತ ಸಾಗಬೇ ಕು ಎಂದರು.ಕಾರ್ಮಿಕ ಇಲಾಖೆ ಅಧಿಕಾರಿ ಹೊನ್ನಪ್ಪ ಮಾತ ನಾಡಿ, ಕನಸು ಕಾಣಿರಿ, ಗುರಿ ನಿಗದಿಪಡಿ ಸಿಕೊಳ್ಳಿ, ನಿರಂತರ ಪ್ರಯತ್ನಿಸಿ, ಯಶಸ್ಸು ನಿಮ್ಮದಾ ಗುತ್ತದೆ ಎಂದು ವಿದ್ಯಾರ್ಥಿಗಳಿಗೆ ಪ್ರೇರಣೆ ನೀಡಿದರು.ನಂತರ ವಿಶೇಷ ಸನ್ಮಾನ ಸ್ವೀಕರಿಸಿದ ನಿವೃತ್ತ ಮುಖ್ಯ ಶಿಕ್ಷಕ ಎಂ.ಎ. ಮಕಂದಾರ ಮಾತ ನಾಡಿ, ವಿದ್ಯಾರ್ಥಿಗಳು ಸರ್ವಪಲ್ಲಿ ರಾಧಾಕೃ ಷ್ಣನ್ ಅವರ ತತ್ವಾದಶ ರ್ಗಳನ್ನು ಜೀವನದಲ್ಲಿ ಅಳವಡಿಸಿ ಕೊಳ್ಳಬೇಕು. ಶಿಕ್ಷಕ ವೃತ್ತಿ ಅತ್ಯಂತ ಶ್ರೇಷ್ಠವಾದ ವೃತ್ತಿ ಯಾಗಿದೆ. ಕಠಿಣ ಪರಿಶ್ರಮದಿಂದ ಮಾತ್ರ ಗೆಲುವು ಸಾಧ್ಯ. ವಿದ್ಯಾ ರ್ಥಿಗಳು ದುಶ್ಚಟ ಗಳಿಗೆ ಬಲಿಯಾಗದೆ, ಗುರಿ ಸಾಧನೆ ಯತ್ತ ಗಮನಹರಿಸಬೇಕು. ಗುರುಗಳ ಮಾರ್ಗದರ್ಶನ ಪಡೆದು ಉತ್ತಮ ಭವಿಷ್ಯ ರೂಪಿಸಿಕೊಳ್ಳಬೇಕು ಎಂದು ಸಲಹೆ ನೀಡಿದರು.ಈ ಸಂದರ್ಭದಲ್ಲಿ ಸಂಸ್ಥೆಯ ಪ್ರಧಾನ ಕಾರ್ಯದರ್ಶಿ ಬಸಣ್ಣ ನರಕಲದಿನ್ನಿ, ಮು ಖ್ಯ ಶಿಕ್ಷಕ ಎಂ.ಬಿ. ಮಲಿಗಾಳ, ಸಂಸ್ಥೆಯ ಸದಸ್ಯರಾದ ರಮೇಶ ಹೊಗರಿ ಅಣ್ಣೇವೋಸೂರು, ಕಾ ರ್ಯ ದರ್ಶಿ ಶ್ರೀಮತಿ ಪ್ರತಿಭಾ ಬನ್ನಿಗೋಳರ, ವ್ಯವ ಸ್ಥಾಪಕ ಕಾರ್ಯದರ್ಶಿ ವಿಜ ಯಲಕ್ಷ್ಮೀ ಗೌ ಡರ, ಮಂಜುನಾಥ ಬನ್ನಿಗೋ ಳರ, ಹನುಮಂತ ಕಟಗಿ, ಪ್ರಾಚಾರ್ಯ ಕೃಷ್ಣಪ್ಪ ಸಾಲಿಮನಿ, ಮುಖ್ಯ ಶಿಕ್ಷಕ ಸಂಗಪ್ಪ ಭಜಂತ್ರಿ, ಪ್ರೌಢಶಾಲೆ ಹಾಗೂ ಕಾಲೇಜಿನ ಉಪನ್ಯಾಸಕರು, ಸಹಶಿಕ್ಷಕರು ಮತ್ತು ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

ಅಶ್ವಿನಿ ಸಾವಿಗೆ ನ್ಯಾಯ ಸಿಗಬೇಕು: ಡಾ. ಪೂಜಾ ರಮೇಶ್

ರಾಯಚೂರು ಸೆ.07: ಅಶ್ವಿನಿ ಸಾವಿಗೆ ಕಾರಣರಾದ ಆರೋಪಿಗಳಿಗೆ ಕಠಿಣ ಶಿಕ್ಷೆಯಾಗಬೇಕು. ಅಶ್ವಿನಿ ಕುಟುಂ ಬಕ್ಕೆ ನ್ಯಾಯ ಒದಗಿಸು ವುದರ ಜೊತೆಗೆ ಕುಟುಂಬಕ್ಕೆ ಸೂಕ್ತ ರಕ್ಷಣೆ ನೀಡಬೇಕು ಹಾಗೂ ಅವರ ಮನೆಯ ಸದಸ್ಯರಿಗೆ ಸರ್ಕಾರಿ ನೌಕರಿ ನೀಡಬೇಕು ಎಂದು ಚಿತ್ರನಟಿ, ಸಮಾಜ ಸೇವಕಿ ಹಾಗೂ ಹೋರಾ ಟಗಾರ್ತಿ ಡಾ. ಪೂಜಾ ರಮೇಶ್ ಒತ್ತಾಯಿಸಿದರು.ನಗರದ ಟಿಪ್ಪು ಸುಲ್ತಾನ್ ಉದ್ಯಾ ನವನದಲ್ಲಿ ಫಾತಿಮಾ ಹುಸೇನ್ ಫೌಂಡೇಶನ್, ವಸಂತ ಲಕ್ಷ್ಮಿ ಫೌಂಡೇ ಶನ್, ದಲಿತ ಸೇನೆ ಹಾಗೂ ವಿವಿಧ ಕನ್ನಡಪರ ಸಂಘಟ ನೆಗಳ ವತಿಯಿಂದ ಹಮ್ಮಿಕೊಂಡಿದ್ದ ಅಶ್ವಿನಿ ಸಾವಿಗೆ ನ್ಯಾಯ ಬೇಕು ಪ್ರತಿಭಟನೆಯಲ್ಲಿ ಭಾಗವಹಿಸಿ ಅವರು ಮಾತನಾಡಿ ದರು.ಉತ್ತರ ಭಾರತದಲ್ಲಿನಡೆಯು ತ್ತಿದ್ದ ಅತ್ಯಾಚಾರ ಮತ್ತು ಕೊಲೆಗಳಂತಹ ಘಟನೆಗಳು ಇದೀಗ ನಮ್ಮ ಸುತ್ತಮು ತ್ತಲಿನಲ್ಲಿಯೂ ನಡೆಯುತ್ತಿರುವುದು ಆತಂಕಕಾರಿ ಸಂಗತಿಯಾಗಿದೆ. ದೇಶಕ್ಕೆ ಸ್ವಾತಂತ್ರ್ಯ ದೊರೆತು 80 ವರ್ಷಗಳಾದರೂ ಮಹಿಳೆಯರಿಗೆ ಸಂಪೂರ್ಣ ಸ್ವಾತಂ ತ್ರ್ಯ ಹಾಗೂ ಸುರಕ್ಷತೆ ಸಿಗದಿರುವುದು ವಿಷಾದ ನೀಯ. ಮಹಿಳೆಯರ ಮೇಲಿನ ಸರ್ಕಾರ ದೌರ್ಜನ್ಯಗಳನ್ನು ತಡೆಗಟ್ಟ ಲು ಗಂಭೀರ ಕ್ರಮ ಕೈಗೊಂಡು, ಮಹಿಳೆಯರಿಗೆ ಸೂಕ್ತ ರಕ್ಷಣೆ ಒದಗಿಸಬೇಕು ಎಂದು ಹೇಳಿದ ರು.ಕನ್ನಡದ ಖ್ಯಾತ ಚಿತ್ರನಟ ಹಾಗೂ ಸಂಗೀತ ನಿರ್ದೇಶಕ ವಿ. ಮನೋಹ್ರ್ ಮಾತ ನಾಡಿ, ಮಹಿಳೆ ಯರನ್ನು ಗೌರವಿ ಸುವ ಮನೋ ಭಾವ ಸಮಾಜದಲ್ಲಿ ಬೆಳೆಸಿಕೊ ಳ್ಳಬೇಕು. ಇಂತಹ ನೆಲದಲ್ಲಿ ಮಹಿಳೆಯರ ಮೇಲೆ ಅತ್ಯಾಚಾರ ಹಾಗೂ ಕೊಲೆಗಳಂತಹ ಘಟನೆಗಳು ನಡೆಯುತ್ತಿರುವುದು ನಿಜಕ್ಕೂ- ನ್ಯಾಯಕ್ಕಾಗಿ ಪ್ರತಿಭಟನೆ ದುಃಖಕರ ಸಂಗತಿಯಾಗಿದೆ. ಮಹಿಳೆಯರ ಸುರಕ್ಷತೆಗೆ ಸರ್ಕಾರ ಹಾಗೂ ಸಮಾಜ ಹೆಚ್ಚಿನ ಆದ್ಯತೆ ನೀಡಬೇಕು ಎಂದು ಹೇಳಿದರು.ಈ ಸಂದರ್ಭದಲ್ಲಿ ವಸಂತ ಲಕ್ಷ್ಮಿ ಫೌಂಡೇಶನ್ ಅಧ್ಯಕ್ಷೆ ಡಾ. ಪೂಜಾ ರಮೇಶ್, ಫಾತಿಮಾ ಹುಸೇನ್ ಫೌಂಡೇಶನ್ ಅಧ್ಯಕ್ಷೆ ಡಾ. ಫಾತಿಮಾ ಹುಸೇನ್, ಹೋರ ಾಟಗಾರ ಮಾರುತಿ ಬಡಿಗೇರ್, ದಲಿತ ಸೇನೆ ಮುಖಂ ಡರಾದ ಜಾವೀದ್ ಖಾನ್ ಮಾನ್ವಿ, ಆಲಂ ಗಣಿ, ಶಾಲಂ, ಚಿರಂಜೀವಿ ಯಾದವ್, ವೀರೇಶ್ ಮ್ಯಾದರ್ ತಿಮ್ಮಪ್ಪ ಪೋತಗಲ್, ತಾಯಪ್ಪ, ಇಂದಿರಾ, ಭಾರತಿ ಹಿರೇಮಠ, ಬಡೆಸಾಬ, ಅಂಜಲಿ ರಾಮ್ ಹಲವರು ಉಪಸ್ಥಿತರಿದ್ದರು.

ಪ್ರವಾದಿ ಸಂದೇಶ ಅರಿತಾಗ ಸಮಾಜದಲ್ಲಿ ಸೌಹಾರ್ದತೆ ಮೂಡುತ್ತದೆ: ಅಕ್ಬರ್ ಅಲಿ ಉಡುಪಿ

ಮಾನ್ವಿ: ಪ್ರವಾದಿಗಳ ಸಂದೇಶವನ್ನು ಯಾವುದೇ ಜಾತಿ, ಧರ್ಮ, ವರ್ಗ, ಪಂಗಡ ಅಥವಾ ಪಂಥಕ್ಕೆ ಸೀಮಿತಗೊಳಿಸುವುದು ಸರಿಯಲ್ಲ. ಜಗತ್ತಿನ ವಿವಿಧ ಧರ್ಮಗಳಲ್ಲಿ ಆಗಮಿಸಿದ ಪ್ರವಾದಿಗಳನ್ನು ದೇವರು ಜನರ ಒಳಿತಿಗಾಗಿ ಹಾಗೂ ಸಮಾಜದಲ್ಲಿನ ಮೂಢನಂಬಿಕೆ, ಕಂದಾಚಾರ, ಮೌಢ್ಯ ಮತ್ತು ಅನಾಚಾರಗಳನ್ನು ದೂರ ಮಾಡುವ ಉದ್ದೇಶದಿಂದ ಸಂದೇಶ ನೀಡಲು ಕಳುಹಿಸಿದ್ದಾನೆ. ಈ ಸತ್ಯವನ್ನು ಅರಿತುಕೊಂಡಾಗ ಮಾತ್ರ ಪ್ರತಿಯೊಬ್ಬರಲ್ಲೂ ಸೌಹಾರ್ದತೆ ಮೂಡಲು ಸಾಧ್ಯ ಎಂದು ಜಮಾಅತೆ ಇಸ್ಲಾಮೀ ಹಿಂದ್ ಕರ್ನಾಟಕದ ರಾಜ್ಯ ಕಾರ್ಯದರ್ಶಿ ಅಕ್ಬರ್ ಅಲಿ ಉಡುಪಿ ಹೇಳಿದರು.

ಪಟ್ಟಣದ ಈದ್ಗಾ ಫಂಕ್ಷನ್ ಹಾಲ್‌ನಲ್ಲಿ ಜಮಾಅತೆ ಇಸ್ಲಾಮೀ ಹಿಂದ್ ತಾಲೂಕು ಸಮಿತಿ ವತಿಯಿಂದ ಆಯೋಜಿಸಿದ್ದ ಸೀರತ್ ಅಭಿಯಾನ2026ರ ಅಂಗವಾಗಿ ನಡೆದ ಪುಸ್ತಕ ಬಿಡುಗಡೆ ಹಾಗೂ ಕ್ರಾಂತಿಯ ಜ್ಯೋತಿಪ್ರವಾದಿ ಮುಹಮ್ಮದ್ (ಸ)' ವಿಚಾರ ಕುರಿತ ವಿಚಾರಗೋಷ್ಠಿ ಉದ್ಘಾಟಿಸಿ ಅವರು ಮಾತನಾಡಿದರು.ಪ್ರವಾದಿಗಳು ಮನುಷ್ಯರನ್ನು ಮನುಷ್ಯರೊಂದಿಗೆ ಜೋಡಿಸುವ ಹಾಗೂ ನಾವೆಲ್ಲರೂ ಒಂದೇ ಎಂಬ ಸಂದೇಶವನ್ನು ನೀಡಿದ್ದಾರೆ. ಪ್ರವಾದಿ ಮುಹಮ್ಮದ್ (ಸ) ಅವರು ಜಗತ್ತಿನ ಕೊನೆಯ ಪ್ರವಾದಿಯಾಗಿದ್ದು, ಮುಸ್ಲಿಂ ಸಮುದಾಯಕ್ಕೆ ಆದರ್ಶಪ್ರಾಯರಾಗಿದ್ದಾರೆ ಎಂದು ತಿಳಿಸಿದರು.

ಎರಡು ಕೃತಿಗಳ ಬಿಡುಗಡೆ :ಕಾರ್ಯಕ್ರಮದಲ್ಲಿ ಯೋಗೇಶ್ ಮಾಸ್ಟರ್ ರಚಿಸಿರುವ ಮಾನವ ಮನಸ್ಸಿನ ಕೃಷಿಕಮನದೊಡೆಯ ಪ್ರವಾದಿ ಮುಹಮ್ಮದ್' ಹಾಗೂ ಅಬ್ದುಸ್ಸಲಾಮ್ ಪುತ್ತಿಗೆ ರಚಿಸಿರುವ ಸಮಗ್ರ ಕ್ರಾಂತಿಯ ಜ್ಯೋತಿ ಬೆಳಗಿದ ಪೈಗಂಬರ್' ಕೃತಿಗಳನ್ನು ಗಣ್ಯರು ಬಿಡುಗಡೆ ಮಾಡಿದರು.ನಿಕಟಪೂರ್ವ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಹಾಗೂ ಸಾಹಿತಿ ಡಾ. ಬಸವಪ್ರಭು ಪಾಟೀಲ್ ಬೆಟ್ಟದೂರು, ಡಾ. ಅಂಬಿಕಾ ಮಾಧು ಸುಧನ್ ಹಾಗೂ ಹಿರಿಯ ವರದಿಗಾರ ಪಿ. ಪರಮೇಶ ಅವರು ಮಾತನಾಡಿ, ಪ್ರವಾದಿ ಮುಹ'ಮ್ಮದ್ (ಸ) ಅವರ ಜೀವನ, ಸಂದೇಶ ಹಾಗೂ ಸಮಾಜಕ್ಕೆ ನೀಡಿದ ಆದರ್ಶಗಳ ಕುರಿತು ವಿಚಾರಗಳನ್ನು ಹಂಚಿಕೊಂಡರು.

ಕಾರ್ಯಕ್ರಮದಲ್ಲಿ ಈದ್ಗಾ ಕಮಿಟಿ ಅಧ್ಯಕ್ಷ ಅಬ್ದುಲ್ ಗಫೂರ್ ಸಾಬ್, ರಾಬಿತಾ-ಎ-ಮಿಲ್ಲತ್ ತಾಲೂ ಕು ಅಧ್ಯಕ್ಷ ಸೈಯದ್ ಅಕ್ಬರ್ ಸಾಬ್, ವೆಲ್ಫೇರ್ ಪಾರ್ಟಿ ಜಿಲ್ಲಾಧ್ಯಕ್ಷ ಮೌಲಾನಾ ಶೇಖ್ ಫರೀದ್ ಉಮ್ರಿ, ಸುವರ್ಣಗಿರಿ ಮಠದ ಶಂಕರ 'ಯ್ಯಸ್ವಾಮಿ, ವಕೀಲ ಗುಮ್ಮ ಬಸವ ರಾಜ, ಸರ್ಕಾರಿ ನೌಕರರ ಸಂಘದ ತಾಲೂಕು ಅಧ್ಯಕ್ಷ ಸುರೇಶ್ ಕುರ್ಡಿ, ಜಮಾಅತೆ ಇಸ್ಲಾಮೀ ಹಿಂದ್ ವಿಭಾಗೀಯ ಸಂಚಾಲಕ ಮೌಲಾನಾ ಅನ್ವರ್ ಪಾಷಾ ಉಮ್ರಿ, ಜಿಲ್ಲಾ ಸಂ ಚಾಲಕ ಅಬ್ದುಲ್ ಕರೀಮ್ ಖಾನ್, ತಾಲೂಕು ಅಧ್ಯಕ್ಷ ಅಬ್ದುಲ್ ರಹೆ ಮಾನ್, ಜಿಲ್ಲಾ ಸಂಚಾಲಕಿ ಸೈಯದಾ ನುಸ್ರತ್ ಜಹಾನ್, ಸಹ ಸಂಚಾಲಕಿ ಆಯಿಷಾ ಸಿದ್ದೀಖಾ, ಶೇಖ್ ಬಾಬಾ ಹುಸೇನ್ ಸಾಬ್, ಉಮರ್ ದೇವರಮನಿ ಸೇರಿದಂತೆ ವಿವಿಧ ಸಮುದಾಯಗಳ ಮುಖಂಡರು ಹಾಗೂ ಮುಸ್ಲಿಂ ಸಮುದಾ ಯದವರು ಭಾಗವಹಿಸಿದ್ದರು.

ಗಡಿಗಳನ್ನು ಮೀರಿದ ಕಲೆ: ಭಾರತ ಮತ್ತು ಇಟಲಿ ನಡುವಿನ ಸೃಜನಶೀಲ ಸಂವಾದ

ಕಲಬುರಗಿ: ಅಂತರರಾಷ್ಟ್ರೀಯ ಖ್ಯಾತಿಯ ಕಲಾವಿದ ಮತ್ತು ಛಾ ಯಾಗ್ರಾಹಕ ಮೊಹಮ್ಮದ್ ಅಯಾ ಜೋದ್ದೀನ್ ಪಟೇಲ್ ಅವರನ್ನು, ಇಟಲಿಯ ವೆನಿಸ್‌ನಲ್ಲಿ ಸೆಪ್ಟೆಂಬರ್ 17 ರಿಂದ 20 ರವರೆಗೆ ನಡೆಯಲಿರುವ ಅಂತರರಾಷ್ಟ್ರೀಯ ಸಹಯೋ ಗದ ಕಲಾ ಪ್ರದರ್ಶನ ಮತ್ತು ಶಿಲ್ಪಕಲಾ ಕಾರ್ಯಾಗಾರದಲ್ಲಿ ಭಾಗವಹಿಸಲು ಆಹ್ವಾನಿಸಲಾಗಿದೆ.

ಎಸ್. ಎಂ. ಡಿ. ಫೌಂಡೇಶನ್ ಮತ್ತು ಹೆಚ್. ಯು. ವೆನೆಜಿಯಾ ಇವು ಗಳ ಜಂಟಿ ಆಶ್ರಯದಲ್ಲಿ, ವೆನಿಸ್‌ನ ಹೆಚ್. ಯು. ವೆನೆಜಿಯಾ ಕ್ಯಾಂಪಿಂಗ್ ಇನ್ ಟೌನ್'ನಲ್ಲಿ ಆರ್ಟ್ ಬಿಯಾಂಡ್ ಬಾರ್ಡರ್ಸ್': ಭಾರತ ಮತ್ತು ಇಟಲಿ ನಡುವಿನ ಸೃಜನಶೀಲ ಸಂವಾದ ಎಂಬ ವಿಶೇಷ ಮೂರು ದಿನಗಳ ಕಾಯಾ ರ್ಯಾಗಾರವನ್ನು ಆಯೋಜಿಸಲಾಗಿದೆ.

ಈ ಉಪಕ್ರಮವು ಕರ್ನಾಟಕ, ಅಸ್ಸಾಂ, ಕೋಲ್ಕತ್ತಾ, ಮುಂಬೈ, ದೆಹಲಿ, ಮಧ್ಯಪ್ರದೇಶ ಮತ್ತು ಬರೋಡಾ ಸೇರಿದಂತೆ ಭಾರತದ ವಿವಿಧ ಭಾಗಗಳ 11 ಮಂದಿ ಗಣ್ಯ ಕಲಾವಿದರನ್ನು ಹಾಗೂ ಪ್ರಮುಖ ಯುರೋಪಿಯನ್ ಕಲಾವಿದರನ್ನು ಒಗ್ಗೂಡಿಸುತ್ತದೆ. ಈ ಕಾರ್ಯಕ್ರಮ ದಲ್ಲಿ ಭಾಗವಹಿಸುತ್ತಿರುವವರ ಪೈಕಿ ಕಲಬುರಗಿಯ ಖ್ಯಾತ ಕಲಾವಿದ ಮೊಹಮ್ಮದ್ ಅಯಾಜೋದ್ದೀನ್ ಪಟೇಲ್ ಕೂಡ ಒಬ್ಬರು.

ಭಾರತೀಯ ಮತ್ತು ಯುರೋ ಪಿಯನ್ ಕಲಾ ಸಮುದಾಯಗಳ ನಡುವೆ ಸಂಬಂಧಗಳನ್ನು ಬೆಳೆಸುವ ಉದ್ದೇಶದಿಂದ, ವೈವಿಧ್ಯಮಯ ಕಲಾತ್ಮಕ ದೃಷ್ಟಿಕೋನಗಳನ್ನು ಅನ್ವೇಷಿಸುವ ಸಂವಾದಗಳು, ಸಹಯೋಗದ ಸಭೆಗಳು ಮತ್ತು ಮುಕ್ತ ಚರ್ಚೆಗಳನ್ನು ಒಳಗೊಂಡಿ ರುವ ಈ ಕಾರ್ಯಾಗಾರವನ್ನು ಸೃಜನಶೀಲತೆ, ಸ್ನೇಹ ಮತ್ತು ಅರ್ಥಪೂರ್ಣ ಸಾಂಸ್ಕೃತಿಕ ವಿನಿಮ ಯದ ಸಂಬಂಧಗಳನ್ನು ಸಂಭ್ರಮಿ ಸಲು ರೂಪಿಸಲಾಗಿದೆ.

ವೆನಿಸ್‌ನಲ್ಲಿ ನಡೆಯುವ ಮೂರು ದಿನಗಳ ಕಾರ್ಯಾಗಾರದ ಜೊತೆಗೆ, ಈ ನಿಯೋಗವು ಸೆಪ್ಟೆಂಬರ್ 9 ರಿಂದ 23 ರವರೆಗೆ ಫ್ರಾನ್ಸ್, ಜರ್ಮ ನಿ, ನೆದರ್‌ಲ್ಯಾಂಡ್ಸ್, ಬೆಲ್ಜಿಯಂ, ಸ್ವಿಜರ್ಲ್ಯಾಂಡ್, ಇಟಲಿಯ ಫ್ಲಾರೆನ್ಸ್ ಮತ್ತು ವ್ಯಾಟಿಕನ್ ಸಿಟಿ ಸೇರಿದಂತೆ ಯುರೋಪ್‌ನ ಸಾಂಸ್ಕೃತಿಕ ರಾಜಧಾನಿಗಳಲ್ಲಿ 15 ದಿನಗಳ ಆಳವಾದ ಅಧ್ಯಯನ ಪ್ರವಾಸವನ್ನು ಕೈಗೊಳ್ಳುತ್ತಿದೆ.

ಬಸವ ಕೈಗಾರಿಕಾ ತರಬೇತಿ ಸಂಸ್ಥೆಯಲ್ಲಿ ಶಿಕ್ಷಕರ ದಿನಾಚರಣೆ ನೈತಿಕ ಮೌಲ್ಯಗಳ ಅರಿವು ಅಗತ್ಯ: ಅಶ್ವಿನಿ ಎಸ್.ಮುಧೋಳ

ಮಾನ್ವಿ:' ವಿದ್ಯಾರ್ಥಿಗಳಿಗೆ ಬೋಧನೆಯ ಜತೆಗೆ ಉತ್ತಮ ವ್ಯಕ್ತಿತ್ವ ರೂಪಿಸಲು ನೈತಿಕ ಮೌಲ್ಯಗಳ ಬಗ್ಗೆ ಅರಿವು ಮೂಡಿಸುವುದು ಅಗತ್ಯ' ಎಂದು ಶಿಕ್ಷಕಿ ಅಶ್ವಿನಿ ಎಸ್.ಮುಧೋಳ ಹೇಳಿದರು.

ಶನಿವಾರ ಪಟ್ಟಣದ ಬಸವ ಕೈಗಾರಿಕಾ ತರಬೇತಿ ಸಂಸ್ಥೆ(ಐಟಿಐ)ಯಲ್ಲಿ ಹಮ್ಮಿಕೊಳ್ಳಲಾಗಿದ್ದ ಶಿಕ್ಷಕರ ದಿನಾಚರಣೆ ಹಾಗೂ ಪ್ರಥಮ ವರ್ಷದ ವಿದ್ಯಾರ್ಥಿಗಳ ಸ್ವಾಗತ ಸಮಾರಂಭದಲ್ಲಿ ಸನ್ಮಾನ ಸ್ವೀಕರಿಸಿ ಅವರು ಮಾತನಾಡಿದರು.' ವಿದ್ಯಾರ್ಥಿಗಳು ಆಸಕ್ತಿ ಹಾಗೂ ಪರಿಶ್ರಮದಿಂದ ಅಧ್ಯಯನದಲ್ಲಿ ತೊಡಗಿಕೊಂಡು ಉನ್ನತ ಸಾಧನೆ ಮಾಡುವ ಮೂಲಕ ವಿದ್ಯೆ ಕಲಿಸಿದ ಗುರುಗಳಿಗೆ ಹಾಗೂ ಹೆತ್ತ ತಂದೆ-ತಾಯಿಗೆ ಕೀರ್ತಿ ತರಬೇಕು' ಎಂದು ಅವರು ಸಲಹೆ ನೀಡಿದರು.ಕಾರ್ಯಕ್ರಮದ ಅಂಗವಾಗಿ ಮಾಜಿ ರಾಷ್ಟ್ರಪತಿ ಡಾ.ಎಸ್.ರಾ ಧಾಕೃಷ್ಣನ್ ಅವರ ಭಾವಚಿತ್ರಕ್ಕೆ ಮಾಲಾರ್ಪಣೆ ಮಾಡಿ ಪೂಜೆ ಸಲ್ಲಿಸಲಾ ಯಿತು.ವಿವಿಧ ಸ್ಪರ್ಧೆಗಳಲ್ಲಿ ವಿಜೇತರಿಗೆ ಬಹುಮಾನಗಳನ್ನು ವಿತರಿ ಸಲಾಯಿತು.ಹಿರಿಯ ಪತ್ರಕರ್ತ ಬಸವರಾಜ ಭೋಗಾವತಿ ಕಾರ್ಯ ಕ್ರಮವನ್ನು ಉದ್ಘಾಟಿಸಿದರು.ಬಸವರಡ್ಡಿ ಶಿಕ್ಷಣ ಸಂಸ್ಥೆಯ ಕಾರ್ಯದರ್ಶಿ ತಿಪ್ಪಣ್ಣ ಎಂ.ಹೊಸಮನಿ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು.ಉಪನ್ಯಾಸಕ ಬಿ.ಬಸವರಾಜ, ಕಿರಿಯ ತರಬೇತಿ ಅಧಿಕಾರಿ ಸುಮಾ ಟಿ.ಹೊಸಮನಿ, ಸಂಪನ್ಮೂಲ ವ್ಯಕ್ತಿ ಮೋಹನ ಯಾದವ, ಜೆಟಿಒ ಸಿಬ್ಬಂದಿ ಅವಿನಾಶ, ಉಮೇರಾ ತಬಸ್ಸುಮ್ ಮತ್ತು ಚೈತ್ರಾ ಉಪಸ್ಥಿತರಿದ್ದರು.

ಹಾವು ಕಡಿದು ಎಮ್ಮೆ ಸಾವು

ಔರಾದ್ : ತಾಲ್ಲೂಕಿನ ಖಾಶೇಂಪುರ(ಬಿ) ಗ್ರಾಮದ ರೈತ ಮಹಿಳೆ ಸಂಗೀತಾ ಗಂಡ ಸಂಗಪ್ಪ ಬಿರಾದಾರ ಅವರಿಗೆ ಸೇರಿದ 70 ಸಾವಿರ ರೂಗಳ ಮೌಲ್ಯದ ಎಮ್ಮೆ ಹೊಲದಲ್ಲಿ ಮೇಯಲು ಹೋದಾಗ ಹಾವು ಕಡಿದು ಮೃತ ಪಟ್ಟಿರುವ ಘಟನೆ ಶುಕ್ರವಾರ ಮುಂಜಾನೆ 8ಗಂಟೆಗೆ ಜರುಗಿದೆ. ಮೂಲತಃ ಬೀದರ್ ತಾಲ್ಲೂಕಿನ ಮರಖಲ್ ಗ್ರಾಮದ ನಿವಾಸಿಗಳಾಗಿರುವ ಈ ಬಡದಂಪತಿಗಳು ಖಾಶೇಂಪುರ (ಬಿ) ಗ್ರಾಮದಲ್ಲಿ ಸ್ವಂತ ಹೊಲ ಇರುವ ಕಾರಣ , ನಾಲ್ಕು ವರ್ಷದಿಂದ ಗದ್ದೆ ಕೆಲಸ ಮಾಡಿಕೊಂಡು ಖಾಶೇಂಪುರ (ಬಿ) ದಲ್ಲಿ ನೆಲೆಸಿರು ವಾಗ ಈ ಘಟನೆ ಸಂಭವಿಸಿದೆ ಎಂದು ಕುಟುಂಬಸ್ಥರು ಆರೋಪಿಸಿರುವ ಘಟನೆ ಶುಕ್ರವಾರ ನಡೆದಿದೆ.

ಹತ್ತಿಗುಡ್ಡ ಗ್ರಾಮದ ಗುರುನಾಥ ಹುಲುಗಪ್ಪ (30) ಮೃತ ವ್ಯಕ್ತಿ. ಗುರುನಾಥ ಅವರು ಶುಕ್ರವಾರ ಮಧ್ಯಾಹ್ನ ಚಿಕಿತ್ಸೆಗಾಗಿ ತುರ್ವಿಹಾ ಳದ ಕ್ಲಿನಿಕ್ ಒಂದಕ್ಕೆ ತೆರಳಿದ್ದರು. ಅಲ್ಲಿ ಚಿಕಿತ್ಸೆ ನೀಡಿದ ಬಳಿಕ ಸ